**KARNATAKA LOKAYUKTA**

NoUplok-1/DE/13/2016/ARE-13
*(Encl: Recommendation & original Report of Inquiry Officer with connected records)*

Dr.B.R.Ambedkar Veedhi,
Multi Storied Building,
Bengaluru,
dated: 20/05/2022.

**To,**
Sri.T.K.Anil Kumar I.A.S.,
I/C Principal Secretary to Government,
Revenue Department,
M.S.Building,
Bengaluru – 560001.

Respected Sir,

**Sub :** Departmental inquiry against (1)Sri.Raja Ahmed, the then Village Accountant, Kusanuru Village, Alanda Taluk, and (2) Sri.Shanthakumar Wadi, the then Revenue Inspector, Kusanuru Village, Alanda Taluk, Kalaburgi Dist.- reg.

Ref: Government Order No. RD 465 BMM 2015 dated 01/01/2016.

*****

With Reference to the above, I am directed to forward herewith the recommendation of Hon'ble Uplokayukta, State of Karnataka, dated 05.05.2022 along with the report of inquiry Officer and relevant records as noted below:

**INDEX**

| File No. | Particulars of Documents | Page Nos. |
|---|---|---|
| | Recommendation dated 05/05/2022 of Hon'ble Upalokayukta along with inquiry report | One sealed cover |
| **File 1** | Order Sheet File (Original). | 1-25 |
| **File 2** | **Documents containing :**<br><br>I. 12(3) of the K.L Act, 1984 in Compt/Uplok/GLB/7234/2014/DRE-3, dated:14/10/2015 (xerox). | 26-30 |

| | | |
|---|---|---|
| | II. Govt. Order No. ಕಂಇ 465 ಬಿಎಂಎಂ 2015, ಬೆಂಗಳೂರು, ದಿನಾಂಕ: 01/01/2016 (xerox).<br><br>III. Nomination Order No. UPLOK-1/DE/ 13/2016, Bengaluru, dated: 11/01/2016 (xerox)<br><br>IV.Articles of charge dated: 21/01/2016 (Original) | 31-33<br><br>34-35<br><br>36-40 |
| | V. First Oral Statement of DGO No-1 dated : 17/02/2016 (Original) | 41 |
| | VI. First Oral Statement of DGO No-2 dated : 17/02/2016 (Original) | 42 |
| | VII. Written Statement of DGO No-1 dated: 01/07/2016, page no. 43-47 Originals, page no. 48-55 xerox copies, page no. 56-67 certified copies, page no. 68 xerox copy. | 43-68 |
| | VIII. Written Statement of DGO No-2 dated: 13/04/2016, page no. 69-72 originals, page no. 73-75 xerox copies. | 69-75 |
| | IX. Second Oral Statement of DGO No-1 dated : 23/09/2019 (Original) | 76 |
| | X. Second Oral Statement of DGO No-2 dated : 23/09/2019 (Original) | 77 |
| | XI. Questtionnarie of DGO No-1 and 2 dated: 02/03/2021 (Original) | 78-81 |
| | XII. Written Argument of DGO No-1 dated: 16/03/2021 (Original) | 82-87 |
| | XIII. Written Argument of DGO No-2 dated: 16/03/2021 (Original) | 88-92 |
| **File 3** | **Witness examined on behalf of the Disciplinary Authority** | |
| | **PW-1**: Sri. Ayyappa (Original) | 93-97 |
| | **Witness examined on behalf of the Defence** | |
| | **DW-1:** Sri. Shankumar (Original) | 98-102 |
| **File 4** | **Documents marked on behalf of the Disciplinary Authority** | |

| | | |
|---|---|---|
| | **Ex. P-1**: Complaint (Original) | 103 |
| | **Ex.P-1(a)**: Form No.I (Original) | 104-105 |
| | **Ex. P-1(b)** : Form No-II (Original) | 106 |
| | **Ex.P-2**: Sale Deed copy (Xerox copies) | 107-114 |
| | **Ex.P-3:** Podi copy (Xerox) | 115 |
| | **Ex.P-4:** Copy of Mutation Register (Form -12) | 116-117 |
| | **Ex.P-5:** Extract of Survey (Xerox copy) | 118 |
| | **Ex.P-6:** Letter from Saibanna dated :02/06/2011 to Assistant Commissioner, Gulbarga ( Xerox ) | 119 |
| | **Ex.P-7:** Proceedings of Assistant Commissioner, Gulbarga dated: 22/12/2012 (Xerox ) | 120-121 |
| | **Ex.P-8:** The letter of Tahasildar, Gulbarga dated:05/12/2011 addressed to Sri. Thippanna, Jevargi Taluk, Gulbarga District (Xerox) | 122 |
| | **Ex.P-9:** The letter dated: 24/12/2014 given by complainant to Deputy Registrar Enquiry-3, Karnataka Lokayukta, Bengaluru (Xerox) | 123-125 |
| | **Documents marked on behalf of the DGO** | |
| | **Ex.D-1:** Note of regarding the khatha transfer of Kusanur Village Sy. No.175/2E (Xerox)<br>**Ex.D-1(a):** Signature of the DGO. | 126 |
| | **Ex.D-2:** Compromise decree in O.S. No.199/2014 of the court of Additional Senior Civil Judge, Kalaburgi (certified copy) | 127-130 |

Yours faithfully,

(Usharani)
Registrar,
Karnataka Lokayukta,
Bengaluru.

Copy to the Addl.Registrar of Enquiries-13, Karnataka Lokayukta, Bengaluru., for information and further necessary action.

KARNATAKA LOKAYUKTA

No.UPLOK-1/DE.13/2016/ARE-13

Multi Storied Building,
Dr. B.R. Ambedkar Veedhi,
Bengaluru-560 001.
Dated 05.05.2022.

**RECOMMENDATION**

Sub:- Departmental inquiry against (1) Sri Raja Ahmed, the then Village Accountant, Kusanuru Village, Alanda Taluk, and (2) Sri Shanthakumar Wadi, the then Revenue Inspector, Kusanuru Village, Alanda Taluk, Kalaburgi District – reg.

Ref:- 1) Government Order No. RD 465 BMM 2015 dated 01.01.2016.

2) Nomination order No. UPLOK-1/DE.13/2016 dated 11.01.2016 of Hon'ble Upalokayukta, State of Karnataka.

3) Inquiry report dated 04.05.2022 of Additional Registrar of Enquiries-13, Karnataka Lokayukta, Bengaluru.

~~~~~~

The Government by its order dated 01.01.2016 initiated the disciplinary proceedings against (1) Sri Raja Ahmed, the then Village Accountant, Kusanuru Village, Alanda Taluk, and (2) Sri Shanthakumar Wadi, the then Revenue Inspector, Kusanuru Village, Alanda Taluk, Kalaburgi District, [hereinafter referred
~~~~~~

to as Delinquent Government Officials, for short as 'DGOs 1 and 2' respectively ] and entrusted the Departmental Inquiry to this Institution.

2. This Institution by Nomination Order No. UPLOK-1/DE.13/2016 dated 11.01.2016 nominated Additional Registrar of Enquiries-4, Karnataka Lokayukta, Bengaluru, as the Inquiry Officer to frame charges and to conduct departmental inquiry against DGOs for the alleged charge of misconduct, said to have been committed by them. Subsequently, the matter was transferred to the Additional Registrar of Enquiries-13 to continue the said inquiry.

3. The DGOs were tried for the following charge;

> " That you DGO1 Sri Raja Ahmad and you DGO.2 Sri Shanathakumar Wadi while working as Village Accountant and Revenue Inspector respectively during the year 2010-11, you DGO.1 submitted a report for change of katha of 1.00 acre of land in Sy.No.175/2E of Kusanur from the complainant Sri Ayyappa S/o Ningappa into the name of Sri Raghavendra Gundappa Tonni, resident of Gulbarga without serving notice to the complainant and without any registered document for transfer of katha and you DGO.2 being the

Revenue Inspector arbitrarily ordered to change katha without examining the genuineness of the report of DGO.1. Thereby you DGO.1 and 2 have failed to maintain absolute integrity and devotion to duty and acted in a manner unbecoming of a Government servant and thus committed misconduct as enumerated u/r 3(1) of Karnataka Civil Service (Conduct) Rules 1966."

4. The Inquiry Officer (Additional Registrar of Enquiries-13) on proper appreciation of oral and documentary evidence has held that, the Disciplinary Authority has '*proved*' the above charge against the DGO 1 Sri Raja Ahmed, the then Village Accountant, Kusanuru Village, Alanda Taluk, and DGO 2 Sri Shanthakumar Wadi, the then Revenue Inspector, Kusanuru Village, Alanda Taluk, Kalaburgi District.

5. On re-consideration of report of inquiry and on perusal of the entire records, I do not find any reason to interfere with the findings recorded by the Inquiry Officer. Therefore, it is hereby recommended to the Government to accept the report of Inquiry Officer.

6. As per the documents furnished by the Enquiry Officer,

i) DGO 1 Sri Raja Ahmed is due to retire from service on 31.07.2026; and

ii) DGO 2 Sri Shanthakumar Wadi, has retired from service(as per his evidence as DW.1).

7. Having regard to the nature of charge 'proved' against DGOs and considering the totality of circumstances, it is hereby recommended to the Govt.

i) to impose penalty of 'withholding two increments payable to DGO 1 Sri Raja Ahmed, with cumulative effect'.

ii) to impose penalty of ' withholding 10% (ten) of pension payable to DGO 2 Sri Shanthakumar Wadi for a period of five years'.

8. Action taken in the matter shall be intimated to this Authority.

Connected records are enclosed herewith.

5/5/22
(JUSTICE B.S.PATIL)
Upalokayukta-1,
State of Karnataka.

## ಕರ್ನಾಟಕ ಲೋಕಾಯುಕ್ತ

ನಂ.ಉಪಲೋಕ್-1/ಡಿಇ/13/2016/ಎ.ಆರ್.ಇ-13

ಡಾ:ಬಿ.ಆರ್.ಅಂಬೇಡ್ಕರ್ ವೀದಿ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು-560001,
ದಿನಾಂಕ: 30/04/2022.

## ವಿಚಾರಣಾ ವರದಿ

**ಉಪಸ್ಥಿತರು:** ಶೋಭಾ ಎಸ್,
ಅಪರ ನಿಬಂಧಕರು (ವಿಚಾರಣೆಗಳು-13),
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

**ವಿಷಯ:** ಆ.ಸ.ನೌ-1) ಶ್ರೀ. ರಾಜಾ ಅಹ್ಮದ, ಹಿಂದಿನ ಗ್ರಾಮ ಲೆಕ್ಕಾಧಿಕಾರಿ, ಕೂಸನೂರು ಗ್ರಾಮ, ನಿಂಬರ್ಗ ಹೋಬಳಿ, ಆಳಂದ ತಾಲ್ಲೂಕು, ಕಲಬುರ್ಗಿ ಜಿಲ್ಲೆ ಮತ್ತು 2) ಶ್ರೀ: ಶಾಂತಕುಮಾರ್ ವಾಡಿ, ಹಿಂದಿನ ರಾಜಸ್ವ ನಿರೀಕ್ಷಕರು, ಪ್ರಸ್ತುತ ಉಪ ತಹಶೀಲ್ದಾರ್, ಕೂಸನೂರು ಗ್ರಾಮ, ನಿಂಬರ್ಗ ಹೋಬಳಿ, ಆಳಂದ ತಾಲ್ಲೂಕು, ಕಲಬುರ್ಗಿ ಜಿಲ್ಲೆ ರವರುಗಳ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

**ಉಲ್ಲೇಖ:**1. ಕಂಪ್ಲೆಂಟ್/ಉಪಲೋಕ್/ಜಿಎಲ್‌ಬಿ/7234/2014/ ಡಿ.ಆರ್.ಇ-3 ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ ದಿನಾಂಕ: 14/10/2015.

2. ಸರ್ಕಾರದ ಆದೇಶ ಸಂಖ್ಯೆ: ಕಂಇ 465 ಬಿಎಂಎಂ 2015, ಬೆಂಗಳೂರು, ದಿನಾಂಕ: 01/01/2016.

3. ನಾಮನಿರ್ದೇಶನ ಸಂಖ್ಯೆ.ಉಪಲೋಕ್-1/ಡಿಇ/ 13/2016, ಬೆಂಗಳೂರು, ದಿನಾಂಕ: 11/01/2016.

* * * *

1. ದೂರುದಾರರಾದ ಶ್ರೀ. ಅಯ್ಯಪ್ಪ ತಂದೆ ನಿಂಗಪ್ಪ ಸಿಂದಗಿ, ಕಲ್ಲ ಹಂಗರಗಾ ಗ್ರಾಮ, ಜೇವರ್ಗಿ ತಾಲ್ಲೂಕು, ಕಲಬುರ್ಗಿ ಜಿಲ್ಲೆ ರವರು ಆಪಾದಿತ ಸರ್ಕಾರಿ ನೌಕರರುಗಳಾದ ಆ.ಸ.ನೌ-1) ಶ್ರೀ. ರಾಜಾ

ಅಹ್ಮದ, ಹಿಂದಿನ ಗ್ರಾಮ ಲೆಕ್ಕಾಧಿಕಾರಿ, ಕೂಸನೂರು ಗ್ರಾಮ, ನಿಂಬರ್ಗ ಹೋಬಳಿ, ಆಳಂದ ತಾಲ್ಲೂಕು, ಕಲಬುರ್ಗಿ ಜಿಲ್ಲೆ ಮತ್ತು 2) ಶ್ರೀ. ಶಾಂತಕುಮಾರ್ ವಾಡಿ, ಹಿಂದಿನ ರಾಜಸ್ವ ನಿರೀಕ್ಷಕರು, ಪ್ರಸ್ತುತ ಉಪ ತಹಶೀಲ್ದಾರ್, ಕೂಸನೂರು ಗ್ರಾಮ, ನಿಂಬರ್ಗ ಹೋಬಳಿ, ಆಳಂದ ತಾಲ್ಲೂಕು, ಕಲಬುರ್ಗಿ ಜಿಲ್ಲೆ ರವರುಗಳ ವಿರುದ್ಧ ದೂರನ್ನು ಸಲ್ಲಿಸಿ, ಸದರಿ ದೂರಿನಲ್ಲಿ ಕೂಸನೂರು ಗ್ರಾಮದ ಸ.ನಂ.175/2-ಇ ನ 3-00 ಎಕರೆ ಜಮೀನನ್ನು ದಿನಾಂಕ: 21/10/1992 ರಂದು ದೂರುದಾರರು ಮತ್ತು ಸಾಯಬಣ್ಣಾ ಸೇರಿ ಜಂಟಿಯಾಗಿ ನೋಂದಣಿ ಕ್ರಯ ಪತ್ರದ ಮೂಲಕ ಉಳ್ಳಪ್ಪ ಮನ್‌ಶೆಟ್ಟಪ್ಪ ರವರಿಂದ ಖರೀದಿಸಿರುತ್ತೇನೆ. ಖರೀದಿಸಿದ ನಂತರ ಸದರಿ ಜಮೀನಿಗೆ ಸಂಬಂಧಿಸಿದಂತೆ ಖಾತೆ ಬದಲಾವಣೆ ಮಾಡಿಕೊಂಡು ತಾವು ಅನುಭವಿಸುತ್ತಿದ್ದೇವೆ. 2011 ನೇ ವರ್ಷದಲ್ಲಿ ಸದರಿ ಜಮೀನಿನ ಪೈಕಿ 1 ಎಕರೆ ಜಮೀನನ್ನು ಸುಳ್ಳು ಅರ್ಜಿ ಮತ್ತು ದಾಖಲೆಯನ್ನು ಸೃಷ್ಟಿ ಮಾಡಿಕೊಂಡು ರಾಘವೇಂದ್ರ ಎನ್ನುವವರ ಹೆಸರಿಗೆ ಖಾತೆ ಬದಲಾವಣೆಯನ್ನು ಮಾಡಿರುತ್ತಾರೆ. ಈ ಸಂಬಂಧ ದೂರುದಾರರು ಸಂಬಂಧಪಟ್ಟ ಅಧಿಕಾರಿಗಳಗೆ ದೂರನ್ನು ಕೊಟ್ಟಿದ್ದು, ಆದರೆ ಸದರಿ ಅಧಿಕಾರಿಗಳು ಈ ಬಗ್ಗೆ ಯಾವುದೇ ಕ್ರಮ ಕೈಗೊಳ್ಳದೇ ಸಿವಿಲ್ ಕೋರ್ಟಿಗೆ ಹೋಗುವಂತೆ ತಿಳಿಸಿರುತ್ತಾರೆ. ಈ ಸಂಬಂಧ ಲೋಕಾಯುಕ್ತ ಕಛೇರಿಗೆ ದೂರನ್ನು ಸಲ್ಲಿಸಿ, ಆ.ಸ.ನೌ-1 ಮತ್ತು 2 ರವರುಗಳ ವಿರುದ್ಧ ಕ್ರಮ ಕೈಗೊಳ್ಳಲು ಕೋರಿದ್ದಾರೆ.

2. ತನಿಖೆ ಪೂರ್ಣಗೊಂಡ ನಂತರ, ಸರ್ಕಾರಕ್ಕೆ ಕರ್ನಾಟಕ ಲೋಕಾಯುಕ್ತ ಅಧಿನಿಯಮದ ಕಲಂ 12(3) ರಡಿಯಲ್ಲಿ ಉಲ್ಲೇಖ (1) ರಲ್ಲಿ ಕಾಣಿಸಿದಂತೆ, ವರದಿ ಸಲ್ಲಿಸಿದ್ದಾಗಿ, ಸದರಿ ವರದಿಯನ್ವಯ ಕರ್ನಾಟಕ ಸರ್ಕಾರವು ಉಲ್ಲೇಖ (2) ರಲ್ಲಿ ಕಾಣಿಸಿದಂತೆ, ದಿನಾಂಕ: 01/01/2016 ರ ಆದೇಶದಂತೆ, ಮಾನ್ಯ ಉಪಲೋಕಾಯುಕ್ತರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸುವಂತೆ ಕೋರಿದ್ದು, ಮಾನ್ಯ ಉಪಲೋಕಾಯುಕ್ತ ರವರು ದಿನಾಂಕ : 11/01/2016 ರಂದು ಅಪರ ನಿಬಂಧಕರು (ವಿಚಾರಣೆಗಳು-4) ರವರಿಗೆ ವಿಚಾರಣೆ ಮಾಡಿ, ವರದಿ ಸಲ್ಲಿಸುವಂತೆ ಉಲ್ಲೇಖ (3) ರಲ್ಲಿ ಕಾಣಿಸಿದಂತೆ ನಾಮನಿರ್ದೇಶನ ಮಾಡಿರುತ್ತಾರೆ.

3. ನಾಮನಿರ್ದೇಶನದ ಆದೇಶದಂತೆ, ಆ.ಸ.ನೌ-1 ಮತ್ತು 2 ರವರುಗಳ ವಿರುದ್ಧ ದೋಷಾರೋಪಣೆ (Articles of Charge) ಅನ್ನು ಅಪರ ನಿಬಂಧಕರು, ವಿಚಾರಣೆಗಳು-4 ರವರು ರಚಿಸಿದ್ದು, ಸದರಿ ದೋಷಾರೋಪಣೆಯು ಅನುಬಂಧ-1 ಮತ್ತು ಅನುಬಂಧ-2 ರೊಂದಿಗೆ ದುರ್ನಡತೆ ಮತ್ತು ಕರ್ತವ್ಯಲೋಪಕ್ಕೆ ಸಂಬಂಧಪಟ್ಟಂತೆ, ವಿವರಗಳುಳ್ಳ ಆರೋಪವನ್ನು ಆ.ಸ.ನೌ-1 ಮತ್ತು 2 ರವರುಗಳಿಗೆ ದಿನಾಂಕ: 21/01/2016 ರಂದು ಈ ಕೆಳಕಂಡಂತೆ ಕಳುಹಿಸಲಾಗಿರುತ್ತದೆ.

4. ಅಧಿಕೃತ ಜ್ಞಾಪನ ಸಂಖ್ಯೆ: ಉಪಲೋಕ್-1 & 2/ಡಿಇ/ವರ್ಗಾವಣೆ/2018, ದಿನಾಂಕ:06/08/2018 ರ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರ ಆದೇಶದಂತೆ ಸದರಿ ಇಲಾಖಾ ವಿಚಾರಣೆಯನ್ನು ಅಪರ ನಿಬಂಧಕರು (ವಿಚಾರಣೆಗಳು-4) ರವರಿಂದ ಅಪರ ನಿಬಂಧಕರು (ವಿಚಾರಣೆಗಳು-13) ಶಾಖೆಗೆ ವರ್ಗಾವಣೆಗೊಂಡಿರುತ್ತದೆ.

## ANNEXURE-1

## CHARGE

5. That, you-DGO-1 Sri. Raja Ahmad and you DGO-2 Sri. Shanthakumar Wadi while working as Village Accountant of Kusanur Village and Revenue Inspector of Gulbarga respectively during the year 2010-11, you DGO-1 submitted a report for change of khatha of 1.00 acres of land in Sy.No.175/2E of Kusanur from the khatha of complainant Sri. Ayyappa S/o Ningappa into the name of Sri. Raghavendra Gundappa Tonni resident of Gulbarga without serving notice to the complaint and without any registered document for transfer of khatha and you DGO-2 being the Revenue Inspector arbitrarily ordered to change of khatha without examining the

genuiness of the report by DGO-1. Thereby, you DGO-1 and 2 have failed to maintain absolute integrity and devotion to duty, the said act of you were un-becoming of a Government Servants and thereby committed mis-conduct as enumerated under Rule 3(1)(i) to (iii) of Karnataka Civil Service (Conduct) Rules 1966.

**ANNEXURE NO-II**

**STATEMENT OF IMPUTATIONS OF MISCONDUCT**

6. An investigation was taken up U/sec. 9 of Karnataka Lokayukta Act, on the complaint filed by Sri. Ayyappa S/o Ningappa Sindhagi, R/o Kalla Hangarga Village in Jewargi Taluk of Gulbarga District (hereinafter referred to as the 'complainant' for short), against the DGO-1 and 2, Smt. Jayashree-Shirastedar at Regional Commissioner's Office at Gulbarga and Sri. Mahadevappa Sasanoor, then Tahasildar of Gulbarga, alleging that illegality in changing khatha of one acres belonging to the complainant in the name of Sri. Raghavendra, who is brother of Smt. Jayashree.

7. After taking up investigation, when comments were called DGO's, Smt. Jayashree and Sri. Mahadevappa Sasanoor, they denied the illegality or dereliction of duty on their part.

8. Smt. Jayashree contended that she is the relative of complainant and he has borrowed money from her father, therefore complainant

himself gave one acre to younger brother and the khatha was also changed, which is in accordance with law. When the khatha was changed she was not working in the office of Tahasildar, Gulbarga.

9. DGO-1 contended that on receiving the application he notified the same in form No-21 on the notice board, the khatha for 3 acres was standing in the name of complainant and one Sri. Saibanna S/o Kalappa and since no objection was received within 30 days he submitted to the DGO-2 for changing khatha. Since the joint khatedars have not given their consent, he submitted the records for verification and approvals.

10. DGO-2 contended that application had submitted application that out of 3 acres, 1 acres in Sy.No.175/2E to be partitioned and DGO-1 had submitted that none of them had submitted objection after notifying in Form No-21 and as per the approval made by the DGO-1 the records were sent to the Shirastedar and after approval, the Shirastedar had incorporated the name of applicant.

11. Sri. Mahadevappa, the then Tahasildar, Gulbarga has stated that he has been retired from service on 31/12/2012 and DGO-1 and 2 have recommended for changing khatha and he has no role in this matter.

12. Countering to the comments of DGO-1 and 2, Smt. Jayashree and Sri. Mahadevappa Sasanoor the complainant filed rejoinder reiterating the complaint allegations.

13. Since no materials on record to show that Smt. Jayashree and Sri. Mahadevappa have committed misconduct, hence they are dropped from the proceedings.

14. In view of the contents of the complaint, comments and rejoinder of the complainant the proceedings against the DGO-1 and 2.

15. The said facts and material on record show that the DGOs, being a public/Government servants, have failed to maintain absolute integrity besides, devotion to duty and acted in a manner unbecoming of a Government Servants, and thereby repeatedly committed misconduct and made themselves liable for disciplinary action.

16. Since said facts and material on record prima-facie show that DGOs have committed misconduct Rule 3(1)(i) to (iii) of KCS (Conduct) Rules, 1966, now, action U/s 12(3) of Karnataka Lokayukta Act, recommendation is made to the Competent Authority to initiate proceedings against the DGOs and to entrust the enquiry to this Authority under Rule 14-A of K.C.S (CC & A) Rules, 1957. In

turn Competent Authority entrusted the enquiry to this institution vide ref (1) and Hon'ble Upalokayukta-1 nominated the enquiry authority to conduct enquiry and report vide ref (2). Hence, the charge.

17. ಈ ಮೇಲ್ಕಂಡ ದೋಷಾರೋಪಣೆಯನ್ನು (ಆರ್ಟಿಕಲ್ಸ್ ಆಫ್ ಚಾರ್ಜ್) ಆ.ಸ.ನೌ-1 ಮತ್ತು 2 ರವರಿಗೆ ಕಳುಹಿಸಿದ್ದು, ಅದು ಜಾರಿಯಾದ ನಂತರ ಆ.ಸ.ನೌ-1 ಮತ್ತು 2 ರವರುಗಳು ದಿನಾಂಕ 17/02/2016 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿದ್ದು, ಸದರಿಯವರುಗಳ ಪ್ರಥಮ ಮೌಖಿಕ ಹೇಳಿಕೆಗಳನ್ನು, ನಿಯಮ-11(9) ಕೆ.ಸಿ.ಎಸ್. ಸಿಸಿಎ ರೂಲ್ಸ್‌ರ ಅಡಿಯಲ್ಲಿ ದಾಖಲಿಸಲಾಗಿರುತ್ತದೆ.

18. ಆ.ಸ.ನೌ-1 ಮತ್ತು 2 ರವರುಗಳಿಗೆ ದಾಖಲೆಗಳ ಪರಿಶೀಲನೆಗಾಗಿ ಅವಕಾಶ ಕಲ್ಪಿಸಲಾಗಿರುತ್ತದೆ.

19. ಮೇಲ್ಕಂಡ ಆಪಾದನೆಗಳಿಗೆ ಸಂಬಂಧಿಸಿದಂತೆ, ಆ.ಸ.ನೌ-1 ಮತ್ತು 2 ರವರುಗಳಿಂದ ಲಿಖಿತ ಹೇಳಿಕೆಯನ್ನು ಕೇಳಲಾಗಿತ್ತು. ಆ.ಸ.ನೌ-1 ರವರು ದಿನಾಂಕ: 01/07/2016 ರಂದು ತಮ್ಮ ಲಿಖಿತ ಹೇಳಿಕೆ ಸಲ್ಲಿಸಿದ್ದು, ಸದರಿ ಹೇಳಿಕೆಯಲ್ಲಿ ತಾನು ಕೂಸನೂರು ಗ್ರಾಮದ ಗ್ರಾಮಲೆಕ್ಕಾಧಿಕಾರಿಯಾಗಿ ಕೆಲಸ ಮಾಡುತ್ತಿದ್ದಾಗ, ರಾಘವೇಂದ್ರ ಎನ್ನುವವರು ದಿನಾಂಕ:14/03/2011 ರಂದು ಭೂಮಿ ಕೇಂದ್ರದಲ್ಲಿ ಕೂಸನೂರು ಗ್ರಾಮದ ಸರ್ವೆ ನಂ.175/2(ಇ) ಜಮೀನಿನಲ್ಲಿ ಒಂದು ಎಕರೆ ಕ್ಷೇತ್ರವನ್ನು ತನ್ನ ಹೆಸರಿಗೆ ಕುಟುಂಬದಲ್ಲಿ ಭಾಗ ಮಾಡಿಕೊಂಡ ಒಪ್ಪಂದದಂತೆ ಖಾತೆ ಬದಲಾವಣೆ ಮಾಡಿಕೊಡಬೇಕೆಂದು ಕೊಟ್ಟ ಅರ್ಜಿಯನ್ನು 2ನೇ ಆ.ಸ.ನೌ ರವರಿಗೆ ಕಳುಹಿಸಲಾಗಿದ್ದು, ಆ.ಸ.ನೌ-2 ರವರು ತದನಂತರ ಸದರಿ ಅರ್ಜಿಯನ್ನು ತನಗೆ ಕಂದಾಯ ನಿಯಮಾನುಸಾರ ಕ್ರಮ ಕೈಗೊಳ್ಳಲು ಕಳುಹಿಸಿದ್ದು, ಆಗ ತಾನು ಸರ್ವೆ ನಂ.175/2(ಇ) ಖಾತೆದಾರರಾದ ಸಾಯಬಣ್ಣಾ (ದೂರುದಾರ) ಮತ್ತು ಜಂಟಿ ಖಾತೆದಾರ ಅಯ್ಯಪ್ಪ ರವರಿಗೆ ಖಾತೆ ಬದಲಾವಣೆಗೆ ಸಲ್ಲಿಸಿದ ಅರ್ಜಿಯ ನೋಟೀಸನ್ನು ಜಾರಿಗೊಳಿಸಲು ಪ್ರಯತ್ನಿಸಿದ್ದು, ಆದರೆ ಸ್ಥಾನಿಕ ಚೌಕಾಸಿಯಿಂದ ಮೇಲೆ ಹೇಳಿದ ವ್ಯಕ್ತಿಗಳು

ಕೂಸನೂರು ಗ್ರಾಮದಲ್ಲಿ ವಾಸವಾಗಿಲ್ಲ ಅವರು ಎಲ್ಲಿ ಇರುತ್ತಾರೆ ಎಂದು ಅವರ ವಿಳಾಸ ತಿಳಿಯದೇ ಇದ್ದುದರಿಂದ ನೋಟೀಸುಗಳನ್ನು ಗ್ರಾಮದ ಛಾವಡಿಗೆ ಅಂಟಿಸಿ 30 ದಿನಗಳ ಒಳಗಾಗಿ ಖಾತೆ ಬದಲಾವಣೆಗೆ ಆಕ್ಷೇಪಣೆಗಳು ಇದ್ದಲ್ಲಿ ತಿಳಿಸುವಂತೆ ಪ್ರಚುರಪಡಿಸಲಾಯಿತು, ಆದರೆ ಯಾವುದೇ ಆಕ್ಷೇಪಣೆಗಳು 30 ದಿನ ಕಳೆದರೂ ಬರದೆ ಇದ್ದುದರಿಂದ, ಆ.ಸ.ನೌ-2 ರವರಿಗೆ ಮುಂದಿನ ಕ್ರಮ ಕೈಗೊಳ್ಳಲು ವರದಿ ಮಾಡಿದೆ. ಪ್ರಕರಣದ ಬಗ್ಗೆ ಪರಿಶೀಲಿಸಲಾಗಿ ಖಾತೆ ಬದಲಾವಣೆಗೆ ಅರ್ಜಿ ಸಲ್ಲಿಸಿದ ರಾಘವೇಂದ್ರ, ಖಾತೆದಾರರಾದ ಸಾಯಬಣ್ಣಾ ಮತ್ತು ಅಯ್ಯಪ್ಪ ರವರು ಸಂಬಂಧಿಕರಾಗಿರುತ್ತಾರೆ ಎಂದು ತಿಳಿದು ಬಂದಿತು. ಖಾತೆ ಬದಲಾವಣೆಯಲ್ಲಿ ತನ್ನದು ಯಾವುದೇ ಪಾತ್ರ ಇಲ್ಲ, ಕೇವಲ ತಾನು ಆ.ಸ.ನೌ-2 ರವರಿಗೆ ವರದಿ ಮಾಡಿದ್ದು, ತನ್ನನ್ನು ಪ್ರಕರಣದಿಂದ ಕೈ ಬಿಡಬೇಕೆಂದು ಕೇಳಿಕೊಂಡಿರುತ್ತಾರೆ ಹಾಗೂ ತಮ್ಮ ಲಿಖಿತ ಹೇಳಿಕೆಯೊಂದಿಗೆ ದಿನಾಂಕ : 27/10/2014 ರಂದು ತಾವು ಲೋಕಾಯುಕ್ತ ಉಪನಿಬಂಧಕರು (ವಿಚಾರಣೆ-3) ಇವರಿಗೆ ಸಲ್ಲಿಸಿದ ವಿವರಣೆ ಸರ್ವೆ ನಂ.175/2(ಇ)ಗೆ ಸಂಬಂಧಪಟ್ಟ ದಾಖಲೆಗಳನ್ನು, ಸಹಾಯಕ ಆಯುಕ್ತರು, ಗುಲ್ಬರ್ಗಾ ಇವರು ಮಾಡಿದ ಆದೇಶ ಮತ್ತು ಗುಲ್ಬರ್ಗಾ ಸಿವಿಲ್ ನ್ಯಾಯಾಲಯದ ಓ.ಎಸ್.ನಂ.199/2014 ರಲ್ಲಿ ಖಾತೆದಾರರಾದ ಸಾಯಬಣ್ಣಾ ಮತ್ತು ಅಯ್ಯಪ್ಪ ಹಾಗೂ ಖಾತೆ ಬದಲಾವಣೆಗೆ ಅರ್ಜಿ ಸಲ್ಲಿಸಿದ ರಾಘವೇಂದ್ರ ರವರ ಮಧ್ಯೆ ಆದ ದಾವಾ ಡಿಕ್ರಿ ಪ್ರತಿಗಳನ್ನು ಹಾಜರುಪಡಿಸಿರುತ್ತಾರೆ.

20. ಆ.ಸ.ನೌ-2 ರವರು ದಿನಾಂಕ: 13/4/2016 ರಂದು ತಮ್ಮ ಲಿಖಿತ ಹೇಳಿಕೆ ಸಲ್ಲಿಸಿದ್ದು, ಸದರಿ ಹೇಳಿಕೆಯಲ್ಲಿ ಪ್ರಕರಣಕ್ಕೆ ಸಂಬಂಧಿಸಿದ ಜಮೀನಿನ ಖಾತೆ ಬದಲಾವಣೆಗೆ ಸಲ್ಲಿಸಿದ ಅರ್ಜಿಯು ತಹಶೀಲ್ದಾರ್ ಆಫೀಸ್ ಮುಖಾಂತರ ತನಗೆ ಬಂದಿದ್ದು, ಅದನ್ನು ತಾನು ಆ.ಸ.ನೌ-1 ರವರಿಗೆ ಮೂಲ ಖಾತೆದಾರರಿಗೆ ನೋಟೀಸ್ ಜಾರಿಗೊಳಿಸಲು ಕಳುಹಿಸಿದ್ದು, ಅದರಂತೆ ಆ.ಸ.ನೌ-1 ರವರು ಖಾತೆದಾರರಿಗೆ ನೋಟೀಸ್ ಜಾರಿಗೊಳಿಸಲಾಯಿತು, ಯಾವುದೇ ಆಕ್ಷೇಪಣೆಗಳು ಬಂದಿಲ್ಲ ಕಾರಣ ಖಾತೆ ಬದಲಾವಣೆ ಮಾಡಲು ಮುಂದುವರೆಯಬಹುದು ಎಂದು ವರದಿ ಮಾಡಿದ್ದರ ಮೇರೆಗೆ ತಾನು ಖಾತೆ ಬದಲಾವಣೆ ಮಾಡಿರುವುದಾಗಿ ಮತ್ತು ತನ್ನದು ಯಾವುದೇ ಪಾತ್ರವಿಲ್ಲ ಕೇವಲ ಆ.ಸ.ನೌ-1 ರವರ ವರದಿಯ ಮೇಲೆ ಕ್ರಮ ಕೈಗೊಂಡಿರುವುದಾಗಿ ಮತ್ತು ತನ್ನದು ಯಾವುದೂ ತಪ್ಪು ಇಲ್ಲ

ಎಂದು ತಿಳಿಸಿರುತ್ತಾರೆ. ಅದೂ ಅಲ್ಲದೇ ಆ.ಸ.ನೌ-2 ರವರು ಮೂಲ ಖಾತೆದಾರರು ಖಾತೆ ಬದಲಾವಣೆ ಮಾಡಿದ್ದಕ್ಕೆ ಸಹಾಯಕ ಕಮೀಷನರ್, ಗುಲ್ಬರ್ಗಾ ರವರಿಗೆ ಅಪೀಲು ಸಂಖ್ಯೆ.62/2011 -12 ರಲ್ಲಿ ಮೇಲ್ಮನವಿ ಸಲ್ಲಿಸಿದ್ದು, ಸಹಾಯಕ ಕಮೀಷನರ್ ರವರು ಮೇಲ್ಮನವಿಯನ್ನು ವಜಾಗೊಳಿಸಿ, ರಾಘವೇಂದ್ರ ಟೊಣ್ಣಿ ರವರ ಹೆಸರಿಗೆ ಖಾತೆ ಬದಲಾವಣೆಯಾಗಿದ್ದರ ಮೇಲೆ ಸಿವಿಲ್ ನ್ಯಾಯಾಲಯಕ್ಕೆ ಹೋಗುವಂತೆ ಆದೇಶಿಸಿದ್ದು, ಅದರಂತೆ ಮೂಲ ಖಾತೆದಾರರು ಗುಲ್ಬರ್ಗಾ ಸಿವಿಲ್ ನ್ಯಾಯಾಲಯದ ಓ.ಎಸ್. ಸಂಖ್ಯೆ. 199/2014 ರಲ್ಲಿ ದಾವೆ ಸಲ್ಲಿಸಿದ್ದು, ಅದು ದಿನಾಂಕ : 22/11/2014 ರಂದು ರಾಜೀ ಮೂಲಕ ಇತ್ಯರ್ಥವಾಗಿರುತ್ತದೆ ಕಾರಣ ಖಾತೆ ಬದಲಾವಣೆಯಲ್ಲಿ ತನ್ನದು ಏನು ಪಾತ್ರ ಇಲ್ಲ, ತನ್ನ ಮೇಲಿನ ಇಲಾಖಾ ವಿಚಾರಣೆಯನ್ನು ಕೈಬಿಡಬೇಕೆಂದು ವಿನಂತಿಸಿಕೊಂಡಿರುತ್ತಾರೆ.

21. ಈ ವಿಚಾರಣೆಯಲ್ಲಿ, ಆ.ಸ.ನೌ-1 ಮತ್ತು 2 ರವರುಗಳ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ತಮ್ಮ ಪರವಾಗಿ ಶ್ರೀ ಅಯ್ಯಪ್ಪ ತಂದೆ ನಿಂಗಪ್ಪ ಸಿಂದಗಿ, ಕಲ್ಲ ಹಂಗರಗಾ ಗ್ರಾಮ, ಜೇವರ್ಗಿ ತಾಲ್ಲೂಕು, ಕಲಬುರ್ಗಿ ಜಿಲ್ಲೆ (ದೂರುದಾರರು) ರವರನ್ನು ಪಿ.ಡಬ್ಲ್ಯೂ-1 ಎಂದು ಸಾಕ್ಷ್ಯ ನುಡಿಸಿಕೊಂಡು ನಿ.ಪಿ-1 ರಿಂದ 9 ರವರೆಗಿನ ದಾಖಲಾತಿಗಳನ್ನು ಶಿಸ್ತು ಪ್ರಾಧಿಕಾರದ ಪರವಾಗಿ ಗುರುತಿಸಿಕೊಂಡಿರುತ್ತಾರೆ. ತದನಂತರ ಆ.ಸ.ನೌ-1 ಮತ್ತು 2 ರವರುಗಳ ದ್ವಿತೀಯ ಮೌಖಿಕ ಹೇಳಿಕೆಯನ್ನು ದಿನಾಂಕ : 23/09/2019 ರಂದು ಪಡೆದುಕೊಳ್ಳಲಾಗಿರುತ್ತದೆ. ತದನಂತರ, ಆ.ಸ.ನೌ-1 ಮತ್ತು 2 ರವರುಗಳು ಕೆ.ಸಿ.ಎಸ್, ಸಿಸಿಎ ನಿಯಮ 11(16) ರಡಿಯಲ್ಲಿ ತಮ್ಮ ಲಿಖಿತ ವಾದ ಮಂಡನೆಯನ್ನು ಸಲ್ಲಿಸಿರುತ್ತಾರೆ.

22. ಆ.ಸ.ನೌ-2 ರವರು ತಮ್ಮ ಪರವಾಗಿ ತಾವೇ ಡಿ.ಡಬ್ಲ್ಯೂ-2 ಎಂದು ಸಾಕ್ಷ್ಯ ನುಡಿದಿದ್ದು, ನಿ.ಡಿ-1 ಮತ್ತು 2 ರವರೆಗಿನ ದಾಖಲಾತಿಗಳನ್ನು ಗುರುತಿಸಿಕೊಂಡಿರುತ್ತಾರೆ. ಆ.ಸ.ನೌ-1 ರವರು ತಮ್ಮ ಪರವಾಗಿ ಯಾವುದೇ ದಾಖಲಾತಿಗಳನ್ನು ಗುರುತಿಸಿಕೊಂಡಿರುವುದಿಲ್ಲ.

23. ಉಭಯ ಪಕ್ಷದವರ ಪರವಾಗಿ ವಾದ ವಿವಾದವನ್ನು ಮತ್ತು ಆ.ಸ.ನೌ-1 ಮತ್ತು 2 ರವರುಗಳ ಪರ ಸಲ್ಲಿಸಿರುವ ದಾಖಲಾತಿಗಳನ್ನು ಪರಿಶೀಲಿಸಲಾಯಿತು.

24. ಈ ಕೆಳಕಂಡ ಅಂಶವು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತದೆ.

**ಅಂಶ-1: ವಿಚಾರಣಾ ಪ್ರಾಧಿಕಾರವು ಆ.ಸ.ನೌ-1 ಮತ್ತು 2 ರವರ ಮೇಲೆ ಆಪಾದಿಸಲಾದ ಎಲ್ಲಾ ಆರೋಪಗಳನ್ನು ರುಜುವಾತುಪಡಿಸಿದೆಯೇ?**

**ಅಂಶ-2: ಆದೇಶವೇನು?**

25. ವಾದ ವಿವಾದದ ನಂತರ ಕಡತವನ್ನು ಪರಿಶೀಲಿಸಲಾಯಿತು ಮತ್ತು ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

26. ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿದೆ.

**ಅಂಶ 1: ಆ.ಸ.ನೌ-1 ಮತ್ತು 2 ರವರುಗಳ ಮೇಲೆ ಸಕಾರಾತ್ಮಕವಾಗಿದೆ.**

**ಅಂಶ 2: ಅಂತಿಮ ಆದೇಶದಂತೆ**

## ಕಾರಣಗಳು:

27. ಈ ಪ್ರಕರಣದಲ್ಲಿ ಆ.ಸ.ನೌ-1 ಮತ್ತು 2 ರವರುಗಳ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ತಮ್ಮ ಪರವಾಗಿ ಶ್ರೀ. ಅಯ್ಯಪ್ಪ ಬಿನ್ ನಿಂಗಪ್ಪ ಸಿಂದಗಿ, ಕಲ್ಲ ಹಂಗರಗ ಗ್ರಾಮ, ಜೇವರ್ಗಿ ತಾಲ್ಲೂಕು, ಗುಲ್ಬರ್ಗಾ ಜಿಲ್ಲೆ ರವರನ್ನು ಪಿ.ಡಬ್ಲ್ಯೂ-1 ಎಂದು ಸಾಕ್ಷ್ಯ ನುಡಿಸಿಕೊಂಡು ನಿ.ಪಿ-1 ರಿಂದ 9 ರವರೆಗಿನ ದಾಖಲಾತಿಗಳನ್ನು ಶಿಸ್ತು ಪ್ರಾಧಿಕಾರದ ಪರವಾಗಿ ಗುರುತಿಸಿಕೊಂಡಿರುತ್ತಾರೆ.

28. **ಪಿ.ಡಬ್ಲ್ಯೂ-1/ ಶ್ರೀ. ಅಯ್ಯಪ್ಪ** ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ತಾನು ಈ ಕೇಸಿನ ಪಿರ್ಯಾದಿ. ತಾನು ಕೂಸನೂರು ಗ್ರಾಮದ ಸರ್ವೆ ನಂ.175/2(ಇ)ನ 3 ಎಕರೆ ಜಮೀನನ್ನು ದಿನಾಂಕ: 21/10/1992 ರಂದು ತಾನು ಮತ್ತು ಸಾಯಬಣ್ಣಾ ಸೇರಿ ಜಂಟಿಯಾಗಿ ನೋಂದಣಿ ಕ್ರಯ ಪತ್ರದ ಮೂಲಕ ಉಳ್ಳಟ್ಟ ಮನ್‌ಶೆಟ್ಟಪ್ಪ ರವರಿಂದ ಖರೀದಿಸಿರುತ್ತೇನೆ. ಖರೀದಿಸಿದ ನಂತರ ಸದರಿ ಜಮೀನಿಗೆ ಸಂಬಂಧಿಸಿದಂತೆ ಖಾತೆ ಬದಲಾವಣೆ ಮಾಡಿಕೊಂಡು ತಾವು ಅನುಭವಿಸುತ್ತಿದ್ದೇವೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

29. ಪಿ.ಡಬ್ಲ್ಯೂ-1 ರವರು ಮುಂದುವರೆದ ತನ್ನ ಮುಖ್ಯ ವಿಚಾರಣೆಯಲ್ಲಿ, 2011ನೇ ವರ್ಷದಲ್ಲಿ ಸದರಿ ಜಮೀನಿನ ಪೈಕಿ ಒಂದು ಎಕರೆ ಜಮೀನನ್ನು ಸುಳ್ಳು ಅರ್ಜಿ ಮತ್ತು ದಾಖಲೆಯನ್ನು ಸೃಷ್ಠಿ ಮಾಡಿಕೊಂಡು ರಾಘವೇಂದ್ರ ಎನ್ನುವವರ ಹೆಸರಿಗೆ ಖಾತೆ ಬದಲಾವಣೆಯನ್ನು ಮಾಡಿರುತ್ತಾರೆ. ಈ ಸಂಬಂಧ ತಾನು ಸಂಬಂಧಪಟ್ಟ ಅಧಿಕಾರಿಗಳಿಗೆ ದೂರನ್ನು ಕೊಟ್ಟಿರುತ್ತೇನೆ. ಆದರೆ ಅವರು ಈ ಬಗ್ಗೆ ಕ್ರಮ ಕೈಗೊಳ್ಳದೆ ಸಿವಿಲ್ ಕೋರ್ಟಿಗೆ ಹೋಗುವಂತೆ ತಿಳಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

30. ಪಿ.ಡಬ್ಲ್ಯೂ-1 ರವರು ಮುಂದುವರೆದ ತನ್ನ ಮುಖ್ಯ ವಿಚಾರಣೆಯಲ್ಲಿ, ದಿನಾಂಕ: 08/09/2014 ರಂದು ತಾನು ನಿ.ಪಿ-1 ರಂತೆ ಲೋಕಾಯುಕ್ತ ಕಚೇರಿಗೆ ದೂರನ್ನು ನೀಡಿರುತ್ತೇನೆ. ಅದರ ಜೊತೆಗೆ ನಮೂನೆ 1 ಮತ್ತು 2 ನ್ನು ನೀಡಿದ್ದು, ಅವುಗಳನ್ನು ಈಗ ನಿ.ಪಿ-1(ಎ) ಮತ್ತು ಬಿ ಎಂದು ಗುರುತಿಸಲಾಗಿದೆ. ಸದರಿ ದೂರಿನೊಂದಿಗೆ ತಾನು ಖರೀದಿಸಿದ ಕ್ರಯ ಪತ್ರದ ನಕಲನ್ನು ನಿ.ಪಿ-2 ರಂತೆ ಅದಕ್ಕೆ ಸಂಬಂಧಿಸಿದ ಪೋಡಿ ಟಿಪ್ಪಣಿ ನಕಾಶೆಯನ್ನು ನಿ.ಪಿ-3 ರಂತೆ, ಹಕ್ಕು ಬದಲಾವಣೆಗೆ ಸಂಬಂಧಪಟ್ಟಂತೆ ನಿ.ಪಿ-4 ರಂತೆ ಮ್ಯುಟೇಷನ್ ಲೀಸ್ಟ್ ಎಕ್ಸ್ಟ್ರ್ಯಾಕ್ಟ್ ಮತ್ತು ನಿ.ಪಿ-5 ರಂತೆ ಸರ್ವೆ ಹಿಸ್ಸಾ ಎಕ್ಸ್ಟ್ರ್ಯಾಕ್ಟ್ ಅನ್ನು ಹಾಜರುಪಡಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

31. ಪಿ.ಡಬ್ಲ್ಯೂ-1 ರವರು ಮುಂದುವರೆದ ತನ್ನ ಮುಖ್ಯ ವಿಚಾರಣೆಯಲ್ಲಿ, ಮಾನ್ಯ ಸಹಾಯಕ ಆಯುಕ್ತರು, ಗುಲ್ಬರ್ಗಾ ರವರಿಗೆ ಸಾಯಬಣ್ಣಾ ರವರು ಹಕ್ಕು ಬದಲಾವಣೆಯನ್ನು ರದ್ದುಗೊಳಿಸುವಂತೆ ಕೋರಿರುವ ಪತ್ರವನ್ನು ನಿ.ಪಿ-6 ರಂತೆ ಮತ್ತು ಈ ಸಂಬಂಧ ಸಹಾಯಕ ಆಯುಕ್ತರು ಮಾಡಿರುವ ಆದೇಶ ನಿ.ಪಿ-7 ರಂತೆ ಮಾಹಿತಿಯ ಹಕ್ಕು ಕಾಯಿದೆಯಲ್ಲಿ ಸದರಿ ಸಂಬಂಧಪಟ್ಟ ಕಡತವನ್ನು ಕೋರಲಾಗಿ ಕೋರಿದ ಕಡತ ಸಿಗುತ್ತಿಲ್ಲ ಎಂದು ನೀಡಿದ ನಿ.ಪಿ-8 ಹಿಂಬರಹವನ್ನು ಹಾಜರುಪಡಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

32. ಪಿ.ಡಬ್ಲ್ಯೂ-1 ರವರು ಮುಂದುವರೆದ ತನ್ನ ಮುಖ್ಯ ವಿಚಾರಣೆಯಲ್ಲಿ, ನಮ್ಮ ಖಾತೆಯ ಜಮೀನನ್ನು ಬೇರೆಯವರಿಗೆ ಮಾಡಿದ ಬಗ್ಗೆ ಸಂಬಂಧಪಟ್ಟ ಗ್ರಾಮ ಲೆಕ್ಕಾಧಿಕಾರಿ ಮತ್ತು ಕಂದಾಯ ನಿರೀಕ್ಷಕರ ತಪ್ಪು ಎದ್ದು ಕಾಣುತ್ತದೆ. ಲೋಕಾಯುಕ್ತ ಕಚೇರಿಗೆ ಆ.ಸ.ನೌ ರವರು ನೀಡಿದ ಸಮಜಾಯಿಷಿಗೆ ಸಂಬಂಧಪಟ್ಟಂತೆ ತಾನು ನಿ.ಪಿ-9 ರಂತೆ ಪ್ರತ್ಯುತ್ತರವನ್ನು ಸಲ್ಲಿಸಿರುತ್ತೇನೆ. ತನಗೆ ಆದ ಅನ್ಯಾಯವನ್ನು ಸರಿಪಡಿಸಲು ಕೋರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

33. ಆ.ಸ.ನೌ-2 ರವರ ಪರ ವಕೀಲರು ನಡೆಸಿದ ಪಾಟೀ ಸವಾಲಿನಲ್ಲಿ ಪಿ.ಡಬ್ಲ್ಯೂ-1 ರವರು ತಾನು ಖರೀದಿ ಮಾಡಿದ ಜಮೀನಿಗೆ ಪ್ರತಿ ವರ್ಷ ಕಂದಾಯವನ್ನು ಕಟ್ಟುತ್ತಾ ಬಂದಿದ್ದು, ಸರ್ವೆ ನಂ.175/2 ಇ ಜಮೀನನ್ನು ಸಾಗುವಳಿ ಮಾಡಿ ಅದರಲ್ಲಿ ಸೂರ್ಯಕಾಂತಿ ಬೆಳೆಯನ್ನು ಬೆಳೆಯುತ್ತಿದ್ದೇನೆ. ಕಂದಾಯ ಕಟ್ಟಿದ ರಸೀದಿಯನ್ನು ತಂದಿರುವುದಿಲ್ಲ. ರಾಘವೇಂದ್ರ ಎಂಬುವವರು ತನಗೆ ಯಾವುದೇ ರೀತಿಯ ಸಂಬಂಧವಿಲ್ಲ. ದಿನಾಂಕ: 25/4/2011 ರಂದು ತನ್ನ ಜಮೀನಿನ ಒಂದು ಎಕರೆಯನ್ನು ಮಾರಾಟ ಮಾಡಲಾಗಿದೆ ಎಂದು ಗೊತ್ತಾಗುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

34. ಆ.ಸ.ನೌ–2 ರವರ ಪರ ವಕೀಲರು ಸದರಿ ಸಾಕ್ಷಿಗೆ ನಡೆಸಿದ ಪಾಟೀ ಸವಾಲಿನಲ್ಲಿ ಸುಳ್ಳು ದಾಖಲಾತಿಗಳನ್ನು ರಾಘವೇಂದ್ರ ಮತ್ತು ಜಯಶ್ರೀ ಎಂಬುವವರು ಸೃಷ್ಟಿಸಿದ್ದು, ತಹಶೀಲ್ದಾರರಿಗೆ ಸುಳ್ಳು ದಾಖಲೆಗಳ ಅರ್ಜಿಯನ್ನು ಸಲ್ಲಿಸಿದ್ದು, ಜಯಶ್ರೀ ಎಂಬುವವರು ತಾಲ್ಲೂಕು ಕಚೇರಿಯಲ್ಲಿ ಯಾವ ಕೆಲಸ ಮಾಡುತ್ತಿದ್ದಾರೆ ಎಂದು ತನಗೆ ಗೊತ್ತಿಲ್ಲ. ಸುಳ್ಳು ದಾಖಲೆಗಳನ್ನು ಸೃಷ್ಟಿಸಿದ ಬಗ್ಗೆ ಗುಲ್ಬರ್ಗಾ ಯೂನಿವರ್ಸಿಟಿ ಪೋಲೀಸ್ ಠಾಣೆಯಲ್ಲಿ ದೂರನ್ನು ಸಲ್ಲಿಸಿದ್ದೆನು ಎಂದು ಸಾಕ್ಷ್ಯ ನುಡಿದಿರುತ್ತಾರೆ.

35. ಆ.ಸ.ನೌ–2 ರವರ ಪರ ವಕೀಲರು ಸದರಿ ಸಾಕ್ಷಿಗೆ ನಡೆಸಿದ ಪಾಟೀ ಸವಾಲಿನಲ್ಲಿ ತಾನು ತಹಶೀಲ್ದಾರ್ ಜಯಶ್ರೀ, ರಾಘವೇಂದ್ರ, ಗ್ರಾಮ ಲೆಕ್ಕಾಧಿಕಾರಿಗಳು ಮತ್ತು ರೆವಿನ್ಯೂ ನಿರೀಕ್ಷಕರ ಮೇಲೆ ದೂರನ್ನು ಸಲ್ಲಿಸಿದ್ದೆ. ಅಸಿಸ್ಟೆಂಟ್ ಕಮೀಷನರ್ ರವರು ಹಿಂಬರಹ ನೀಡಿದ ಮೇಲೆ ತಾನು ರಾಘವೇಂದ್ರ ರಾವ್ ರವರ ಮೇಲೆ ಸಿವಿಲ್ ದಾಖಲೆಗಳನ್ನು ಸಲ್ಲಿಸಿರುತ್ತೇನೆ. ಆ ದಾವೆಯಲ್ಲಿ ಗ್ರಾಮ ಲೆಕ್ಕಾಧಿಕಾರಿ ಮತ್ತು ಕಂದಾಯ ನಿರೀಕ್ಷಕರನ್ನು ಸೇರಿಸಿಲ್ಲ. ಅವರನ್ನು ಸಾಕ್ಷಿಯಾಗಿ ಸೇರಿಸಿದ್ದೇನೆ ಅಥವಾ ಇಲ್ಲವೋ ಎಂದು ನಮ್ಮ ವಕೀಲರಿಗೆ ಗೊತ್ತು ಎಂದು ಸಾಕ್ಷ್ಯ ನುಡಿದಿರುತ್ತಾರೆ.

36. ಆ.ಸ.ನೌ–2 ರವರ ಪರ ವಕೀಲರು ಸದರಿ ಸಾಕ್ಷಿಗೆ ನಡೆಸಿದ ಪಾಟೀ ಸವಾಲಿನಲ್ಲಿ ನಿ.ಪಿ–4 ರಂತೆ ತನಗೆ ಗ್ರಾಮ ಲೆಕ್ಕಾಧಿಕಾರಿಗಳಿಂದ ನೋಟೀಸ್ ಜಾರಿಯಾಗಿತ್ತು ಎನ್ನುವುದು ಸರಿಯಲ್ಲ. ಇದರಲ್ಲಿ ಆಪಾದಿತ ಸರ್ಕಾರಿ ನೌಕರರದ್ದು ತಪ್ಪಿಲ್ಲ ಮತ್ತು ರಾಘವೇಂದ್ರ ರವರು ಕೊಟ್ಟ ಅರ್ಜಿಗೆ ಯಾವ ಆಕ್ಷೇಪಣೆ ಇಲ್ಲದಿದ್ದರಿಂದ ಮ್ಯುಟೇಷನ್ ಮಾಡಿದ್ದಾರೆ ಎನ್ನುವುದು ಸರಿಯಲ್ಲ. ತನಗೆ ನಿ.ಡಿ–1 ರಲ್ಲಿ ತೋರಿಸಿದಂತೆ ನೋಟೀಸ್ ಜಾರಿಯಾಗಿದ್ದು, ಆಕ್ಷೇಪಣೆಯನ್ನು ಸಲ್ಲಿಸಿಲ್ಲವಾದ್ದರಿಂದ ರಾಘವೇಂದ್ರರವರ ಹೆಸರಲ್ಲಿ ಬದಲಾವಣೆಯಾಗಿದೆ ಎನ್ನುವುದು ಸರಿಯಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ.

37. ಆ.ಸ.ನೌ–2 ರವರ ಪರ ವಕೀಲರು ಸದರಿ ಸಾಕ್ಷಿಗೆ ನಡೆಸಿದ ಪಾಟೀ ಸವಾಲಿನಲ್ಲಿ ಅದರಂತೆ 2ನೇ ಆ.ಸ.ನೌ ರವರು ಕಾನೂನಿನ ಪ್ರಕಾರ ಬದಲಾವಣೆ ಮಾಡಿದ್ದಾರೆ ಎನ್ನುವುದು ಸರಿಯಲ್ಲ. 2ನೇ ಆ.ಸ.ನೌ ರವರು ಕಾನೂನು ಪ್ರಕಾರ ಬದಲಾವಣೆ ಮಾಡಿದ್ದು, ಯಾವುದೇ ರೀತಿಯ ತಪ್ಪು ಅವರದ್ದಲ್ಲ ಎನ್ನುವುದು ಸರಿಯಲ್ಲ. ಕರ್ನಾಟಕ ಕಂದಾಯ ನಿಯಮದ ಪ್ರಕಾರ ತನಗೆ ಅಪೀಲು ಸಲ್ಲಿಸುವ ಹಕ್ಕು ಇದ್ದು, ಸೂಕ್ತ ಕ್ರಮ ಕೈಗೊಳ್ಳಬೇಕಾಗಿತ್ತು ಮತ್ತು ಆದರೂ ಸಹ ಈ ಸಂಸ್ಥೆಗೆ ಸುಳ್ಳು ದೂರನ್ನು ಸಲ್ಲಿಸಿರುತ್ತೇನೆ ಎನ್ನುವುದು ಸರಿಯಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ.

38. ಆ.ಸ.ನೌ–1 ರವರ ಪರ ವಕೀಲರು ಸದರಿ ಸಾಕ್ಷಿಗೆ ನಡೆಸಿದ ಪಾಟೀ ಸವಾಲಿನಲ್ಲಿ ತನ್ನ ಜಮೀನು ಕಲಬುರಗಿಯ ಕೂಸನೂರು ಗ್ರಾಮದಲ್ಲಿದ್ದು, ತಾನು ಕಲಬುರಗಿಯ ಕಲ್ಲಂದರ್ ಏರಿಯಾದಲ್ಲಿ ವಾಸವಾಗಿದ್ದೆನು. ಸರ್ವೆ ನಂ.175/2–ಇ ಒಟ್ಟು 3 ಎಕರೆ ಎದ್ದು, ಆ 3 ಎಕರೆ ತನ್ನ ಮತ್ತು ಸಾಯಬಣ್ಣಾ ರವರ ಹೆಸರಿನಲ್ಲಿದ್ದು, ತನಗೆ ಮತ್ತು ಸಾಹೇಬಣ್ಣನಿಗೆ ಯಾವುದೇ ರೀತಿಯ ಸಂಬಂಧವಿಲ್ಲ. ತನಗೆ ರಾಘವೇಂದ್ರ ಎಂಬುವವರ ಪರಿಚಯವಿಲ್ಲ. ತನಗೆ ತಿಳಿದ ಮಟ್ಟಿಗೆ ರಾಘವೇಂದ್ರನಿಗೆ ಮತ್ತು ಸಾಹೇಬಣ್ಣ ಪರಿಚಯವಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ.

39. ಆ.ಸ.ನೌ–1 ರವರ ಪರ ವಕೀಲರು ಸದರಿ ಸಾಕ್ಷಿಗೆ ನಡೆಸಿದ ಪಾಟೀ ಸವಾಲಿನಲ್ಲಿ ಸದರಿ ದೂರನ್ನು ತಾನು ಒಬ್ಬನೇ ಕೊಟ್ಟಿದ್ದು, ಸಾಹೇಬಣ್ಣ ರವರು ಕೊಟ್ಟಿರುವುದಿಲ್ಲ. 2011 ರಲ್ಲಿ 1ನೇ ಆಪಾದಿತ ಸರ್ಕಾರಿ ನೌಕರರು ಕೂಸನೂರು ಗ್ರಾಮದ ಲೆಕ್ಕಾಧಿಕಾರಿಯಾಗಿ ಕೆಲಸ ಮಾಡುತ್ತಿದ್ದು, ತನಗೆ ಮತ್ತು ಆತನಿಗೆ ಪರಿಚಯ ಅಥವಾ ದ್ವೇಷವಿಲ್ಲ. ಸಾಯಬಣ್ಣಾ ಮತ್ತು ತನಗೆ ಹಕ್ಕು ಬಿಡುಗಡೆ ಪತ್ರವಾಗಿದ್ದರಿಂದ ಅದನ್ನು ಸಾಯಬಣ್ಣಾ ತಾಲ್ಲೂಕು ಕಚೇರಿಗೆ

ಕೊಟ್ಟಿರುತ್ತಾರೆ ಎಂದು ಹೇಳುವುದು ಸರಿಯಲ್ಲ. ಆ ಪತ್ರದ ಪ್ರಕಾರ 1ನೇ ಆ.ಸ.ನೌ ರವರು ಕ್ರಮ ಜರುಗಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

40. ಆ.ಸ.ನೌ–1 ರವರ ಪರ ವಕೀಲರು ಸದರಿ ಸಾಕ್ಷಿಗೆ ನಡೆಸಿದ ಪಾಟೀ ಸವಾಲಿನಲ್ಲಿ ಕೂಸನೂರು ಗ್ರಾಮದಲ್ಲಿ ತಾನು ವಾಸವಿಲ್ಲ ಎನ್ನುವುದು ಸರಿ. ಆದ್ದರಿಂದ ನೋಟೀಸನ್ನು ಊರಿನ ಛಾವಡಿ ಕಟ್ಟೆಗೆ ಅಂಟಿಸಿದ್ದರು ಎನ್ನುವುದು ಸರಿಯಲ್ಲ. ಆ ಬಗ್ಗೆ ನಿ.ಪಿ–4 ರಲ್ಲಿ ದಾಖಲಾತಿ ಇದೆ ಎನ್ನುವುದು ಸರಿಯಲ್ಲ. 1ನೇ ಆ.ಸ.ನೌ ರವರು ಯಾವ ತಿದ್ದುಪಡಿ ಮಾಡಿರುವುದಿಲ್ಲ ಮತ್ತು ಕೇವಲ ವರದಿಯನ್ನು ಹಿರಿಯ ಅಧಿಕಾರಿಗಳಿಗೆ ಸಲ್ಲಿಸಿರುತ್ತಾರೆ ಎನ್ನವುದು ಸರಿಯಲ್ಲ. ಈ ಕೇಸಿನಲ್ಲಿ ಫಿರ್ಯಾದಿದಾರರ ಪಾತ್ರವಿಲ್ಲ ಎನ್ನುವುದು ಸರಿಯಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ.

41. ಆ.ಸ.ನೌ–1 ರವರ ಪರ ವಕೀಲರು ಸದರಿ ಸಾಕ್ಷಿಗೆ ನಡೆಸಿದ ಪಾಟೀ ಸವಾಲಿನಲ್ಲಿ ತಾನು ಎ.ಸಿ ಕಚೇರಿಯಲ್ಲಾಗಲೀ ಅಥವಾ ಕೋರ್ಟ್‌ನಲ್ಲಾಗಲೀ 1ನೇ ಆ.ಸ.ನೌ ರವರ ಮೇಲೆ ಯಾವುದೇ ಆಪಾದನೆ ಮಾಡಿಲ್ಲ ಎನ್ನುವುದು ಸರಿಯಲ್ಲ. ಆ.ಸ.ನೌ ರವರ ಮೇಲೆ ಸುಳ್ಳು ದೂರನ್ನು ಸಲ್ಲಿಸಿರುತ್ತೇನೆ ಎನ್ನುವುದು ಸರಿಯಲ್ಲ. ಸಾಯಬಣ್ಣಾನ ಹೆಸರಿನಲ್ಲಿದ್ದ ಜಮೀನು ರಾಘವೇಂದ್ರರವರ ಹೆಸರಿನಲ್ಲಾಗಿದೆ ಎನ್ನುವುದು ಸರಿಯಲ್ಲ. ಆ ಆದೇಶ ಮಾಡಿರುವುದು ರಾಜಸ್ವ ನಿರೀಕ್ಷಕರು ಎನ್ನುವುದು ಸರಿ. ಅದರಲ್ಲಿ 1 ನೇ ಆ.ಸ.ನೌ ರವರ ಪಾತ್ರವಿಲ್ಲ ಎನ್ನುವುದು ಸರಿಯಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ.

42. ಆ.ಸ.ನೌ–2 ರವರು ಡಿ.ಡಬ್ಲ್ಯೂ–1 ರವರಂತೆ ಸಾಕ್ಷ್ಯ ನುಡಿದಿರುತ್ತಾರೆ. ಡಿ.ಡಬ್ಲ್ಯೂ–1 ರವರು ತನ್ನ ಮುಖ್ಯ ವಿಚಾರಣೆಯಲ್ಲಿ 2010 ನೇ ಇಸವಿಯಲ್ಲಿ ತಾನು ಗುಲ್ಬರ್ಗಾ ತಾಲ್ಲೂಕಿನ ಗುಲ್ಬರ್ಗಾ ಹೋಬಳಿಯಲ್ಲಿ ಕಂದಾಯ ನಿರೀಕ್ಷಕನಾಗಿ ಸೇವೆ ಸಲ್ಲಿಸುತ್ತಿದ್ದೆ. ಕೂಸನೂರು

ಗ್ರಾಮ ತನ್ನ ವ್ಯಾಪ್ತಿಯಲ್ಲಿ ಬರುತ್ತಿತ್ತು. ಆ.ಸ.ನೌ–1 ರವರು ಸದರಿ ಗ್ರಾಮದ ಗ್ರಾಮ ಲೆಕ್ಕಾಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದರು. ರಾಘವೇಂದ್ರ ಎಂಬುವ ವ್ಯಕ್ತಿ ಖಾತಾ ಬದಲಾವಣೆಗೆ ತಹಶೀಲ್ದಾರ್ ಕಚೇರಿಯಲ್ಲಿ ಸರ್ವೇ ನಂಬರ್ 175/2ಇ ಜಮೀನಿಗೆ ಸಂಬಂಧಿಸಿದಂತೆ ಅರ್ಜಿ ಸಲ್ಲಿಸಿದ್ದರು ಎಂದು ಸಾಕ್ಷ್ಯ ನುಡಿದಿರುತ್ತಾರೆ.

43. ಡಿ.ಡಬ್ಲ್ಯೂ–1 ರವರು ತನ್ನ ಮುಖ್ಯ ವಿಚಾರಣೆಯಲ್ಲಿ ತಹಶೀಲ್ದಾರ್ ಕಚೇರಿಯಿಂದ ಕಡತವು ನೋಟೀಸ್ ನೀಡಲು ತನ್ನ ಕಚೇರಿಗೆ ಬಂದಿದ್ದು, ತಾನು ಸದರಿ ಕಡತವನ್ನು ಆ.ಸ.ನೌ–1 ರವರಿಗೆ ಪ್ರಚೂರ ಪಡಿಸಲು ಕಳುಹಿಸಿ ಕೊಟ್ಟೆನು. ಆ.ಸ.ನೌ–1 ರವರು 30 ದಿನಗಳ ಅವಧಿಯಲ್ಲಿ ಯಾವುದೇ ತಕರಾರು ಬಂದಿರುವುದಿಲ್ಲವೆಂದು ಹಾಗೂ ಹೆಸರು ಬದಲಾವಣೆ ಮಾಡಲು ತನಗೆ ವರದಿ ಸಲ್ಲಿಸಿದ್ದು, ಸದರಿ ದಾಖಲಾತಿಯನ್ನು ಈಗಾಗಲೇ **ನಿ.ಡಿ**–1 ಎಂದು ಗುರುತಿಸಲಾಗಿದೆ. ಆ.ಸ.ನೌ–1 ರವರ ವರದಿಯ ಆಧಾರದ ಮೇಲೆ ಖಾತೆ ಬದಲಾವಣೆ ಮಾಡಿ ಆದೇಶ ಮಾಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

44. ಡಿ.ಡಬ್ಲ್ಯೂ–1 ರವರು ತನ್ನ ಮುಖ್ಯ ವಿಚಾರಣೆಯಲ್ಲಿ ಇದಾದ ನಂತರ ಕಡತವನ್ನು ತಹಶೀಲ್ದಾರ್ ಕಚೇರಿಗೆ ಕಳುಹಿಸಿಕೊಟ್ಟಿದ್ದು, ನಂತರ ಸಾಯಬಣ್ಣಾ ಎನ್ನುವವರು ತಹಶೀಲ್ದಾರ್ ರವರಿಗೆ ಅರ್ಜಿ ಸಲ್ಲಿಸಿದ್ದು, ಅದಾದನಂತರ ಸಹಾಯಕ ಕಮೀಷನರ್ ರವರಿಗೆ ಮೇಲ್ಮನವಿ ಸಲ್ಲಿಸಿದ್ದು, ಸಹಾಯಕ ಕಮೀಷನರ್ ರವರು ಮೇಲ್ಮನವಿಯನ್ನು ವಜಾ ಮಾಡಿ, ತಮ್ಮ ಹಕ್ಕು ನಿರ್ಣಯಿಸಿಕೊಳ್ಳಲು ಸಿವಿಲ್ ನ್ಯಾಯಾಲಯಕ್ಕೆ ಮೊರೆ ಹೋಗುವಂತೆ ಆದೇಶ ಮಾಡಿದ್ದು, ಸದರಿ ಸಾಯಬಣ್ಣಾ ಇವರು ಸಿವಿಲ್ ನ್ಯಾಯಾಲಯದಲ್ಲಿ ಪ್ರಕರಣವನ್ನು ರಾಜೀ ಮಾಡಿಕೊಂಡಿದ್ದು, ಸದರಿ ಡಿಕ್ರಿಯ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು, ಅದನ್ನು **ನಿ.ಡಿ–2** ಎಂದು ಗುರುತಿಸಲಾಗಿದೆ. ತಾನು ಯಾವುದೇ ತಪ್ಪನ್ನು ಮಾಡಿರುವುದಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ.

45. ಮಂಡನಾಧಿಕಾರಿಯವರು ಡಿ.ಡಬ್ಲ್ಯೂ-1 ರವರನ್ನು ವಿಚಾರಣೆಗೊಳಪಡಿಸಿದ ಪಾಟೀ ಸವಾಲಿನಲ್ಲಿ ತಾನು ಗುಲ್ಬರ್ಗಾ ಹೋಬಳಿಯ ಕಂದಾಯ ನಿರೀಕ್ಷಕನಾಗಿ 2009 ರಿಂದ 2011 ರವರೆಗೆ ಕೆಲಸ ಮಾಡಿದ್ದೇನೆ. ಕೂಸನೂರು ಗ್ರಾಮ ಗುಲ್ಬರ್ಗಾ ಹೋಬಳಿಯಲ್ಲಿ ಬರುತ್ತದೆ. ಸರ್ವೆ ನಂ.175/2ಇ 3 ಎಕರೆ ಜಮೀನು ದೂರುದಾರ ಅಯ್ಯಪ್ಪ ಮತ್ತು ಇನ್ನೊಬ್ಬ ಸಾಯಬಣ್ಣಾ ಎಂಬುವವರ ಹೆಸರಿನಲ್ಲಿ ಜಂಟಿ ಖಾತೆಯಲ್ಲಿತ್ತು, ಅದರಲ್ಲಿ ದಿನಾಂಕ : 25/04/2011 ರಂದು 1 ಎಕರೆ ಜಮೀನನ್ನು ರಾಘವೇಂದ್ರ ಎನ್ನುವವರ ಹೆಸರಿಗೆ ಹಕ್ಕು ಬದಲಾವಣೆ ಮಾಡಿ, ಮ್ಯುಟೇಷನ್ ಮಂಜೂರಾತಿ ತಾನೇ ಮಾಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

46. ಮಂಡನಾಧಿಕಾರಿಯವರು ಡಿ.ಡಬ್ಲ್ಯೂ-1 ರವರನ್ನು ವಿಚಾರಣೆಗೊಳಪಡಿಸಿದ ಪಾಟೀ ಸವಾಲಿನಲ್ಲಿ ತಾನು ಮ್ಯುಟೇಷನ್ ಮಂಜೂರಾತಿ ಮಾಡುವ ಕಾಲಕ್ಕೆ ಹಕ್ಕು ಬದಲಾವಣೆ ಮಾಡಿಸಿಕೊಳ್ಳುವವರ ಅರ್ಜಿ ಹಾಗೂ ಮೂಲ ಮಾಲೀಕರ ಒಪ್ಪಿಗೆ ಪತ್ರ ಸ್ಟ್ಯಾಂಪ್ ಮೇಲೆ ಬರೆದುಕೊಟ್ಟಿದ್ದನ್ನು ನೋಡಿ, ಮ್ಯುಟೇಷನ್ ಮಂಜೂರಾತಿ ಮಾಡಿರುತ್ತೇನೆ. ತಾನು ಸಂಬಂಧಪಟ್ಟ ಗ್ರಾಮಲೆಕ್ಕಾಧಿಕಾರಿ ಖಾತೆ ಬದಲಾವಣೆಗೆ ಶಿಫಾರಸ್ಸು ಮಾಡಿರುವುದನ್ನು ನೋಡಿ ಹಾಗೂ ಅದಕ್ಕೆ ಇರುವ ಪೂರಕ ದಾಖಲೆಗಳನ್ನು ಪರಿಶೀಲಿಸಿ, ಹಕ್ಕು ಬದಲಾವಣೆ ಮಂಜೂರಾತಿ ಮಾಡುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

47. ಮಂಡನಾಧಿಕಾರಿಯವರು ಡಿ.ಡಬ್ಲ್ಯೂ-1 ರವರನ್ನು ವಿಚಾರಣೆಗೊಳಪಡಿಸಿದ ಪಾಟೀ ಸವಾಲಿನಲ್ಲಿ ಒಪ್ಪಿಗೆ ಪತ್ರ ಮೂಲ ಮಾಲೀಕರಿಂದ ಬರೆದುಕೊಟ್ಟಂತಹ ನೋಂದಾಯಿತ ಖರೀದಿ ಪತ್ರ ಅಲ್ಲ ಅನ್ನುವುದು ನಿಜ. ದೂರುದಾರ ಮತ್ತು ರಾಘವೇಂದ್ರ ಸಂಬಂಧಿಕರು ಇರುವ ಬಗ್ಗೆ ತನಗೆ ಗೊತ್ತಿಲ್ಲ. ಮೂಲ ಮಾಲೀಕರು ಬರೆದುಕೊಟ್ಟಿದ್ದಾರೆನ್ನುವ ಒಪ್ಪಿಗೆ ಪತ್ರವನ್ನು ತಾನು ಹಾಜರುಪಡಿಸಿಲ್ಲ. ಅದು ನಮ್ಮ ಕಚೇರಿಯ ದಾಖಲೆಗಳಲ್ಲಿ ಲಭ್ಯವಿರುತ್ತದೆ

ಎನ್ನುವುದು ನಿಜ. ದೂರುದಾರ ಅಯ್ಯಪ್ಪ ಮತ್ತು ಸಾಯಬಣ್ಣಾ ಎನ್ನುವವರು ತನ್ನ ಮುಂದೆ ಹಾಜರಾಗಿರುವುದಿಲ್ಲ. ತಾನು ಅವರನ್ನು ಎಂದೂ ನೋಡಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ.

48. ಮಂಡನಾಧಿಕಾರಿಯವರು ಡಿ.ಡಬ್ಲ್ಯೂ-1 ರವರನ್ನು ವಿಚಾರಣೆಗೊಳಪಡಿಸಿದ ಪಾಟೀ ಸವಾಲಿನಲ್ಲಿ ಒಂದು ಸ್ಥಿರ ಆಸ್ತಿ ಮೂಲ ಮಾಲೀಕರಿಂದ ಬೇರೆಯವರಿಗೆ ಮಾಲೀಕತ್ವ ಬದಲಾವಣೆಯಾಗಬೇಕಾದರೆ, ಸದರಿ ದಾಖಲಾತಿ ಸಬ್-ರಿಜಿಸ್ಟಾರ್ ರವರ ಕಚೇರಿಯಲ್ಲಿ ನೊಂದಾವಣೆಯಾಗಿದ್ದಲ್ಲಿ ಮಾತ್ರ ಸದರಿ ನೊಂದಾಯಿತ ದಾಖಲೆಯ ಆಧಾರದ ಮೇಲಿಂದ ಹಕ್ಕು ಬದಲಾವಣೆ ಮಾಡಲು ಅವಕಾಶ ಇರುತ್ತದೆ ಎನ್ನುವುದು ನಿಜ. ತಾನು ರಾಘವೇಂದ್ರ ರವರ ಹೆಸರಿಗೆ ಈ ಮೇಲೆ ಹೇಳಿದ ಜಮೀನಿನಲ್ಲಿ 1 ಎಕರೆ ಕ್ಷೇತ್ರವನ್ನು ಹಕ್ಕು ಬದಲಾವಣೆ ಮಾಡಿದ ಬಗ್ಗೆ ಯಾವುದೇ ನೊಂದಾಯಿತ ದಾಖಲೆ ಇರುವುದಿಲ್ಲ. ಎಂದು ಸಾಕ್ಷ್ಯ ನುಡಿದಿರುತ್ತಾರೆ.

49. ಮಂಡನಾಧಿಕಾರಿಯವರು ಡಿ.ಡಬ್ಲ್ಯೂ-1 ರವರನ್ನು ವಿಚಾರಣೆಗೊಳಪಡಿಸಿದ ಪಾಟೀ ಸವಾಲಿನಲ್ಲಿ ಮ್ಯುಟೇಷನ್ ಬದಲಾವಣೆ ಪೂರ್ವದಲ್ಲಿ ಮೂಲ ಮಾಲೀಕರಿಗೆ ನೋಟೀಸ್ ಖುದ್ದಾಗಿ ಜಾರಿಯಾಗಿರಲಿಲ್ಲ ಅಂದರೆ ಸರಿಯಲ್ಲ. ಮೂಲ ಮಾಲೀಕರಿಗೆ ಗ್ರಾಮಲೆಕ್ಕಾಧಿಕಾರಿ ಜಾರಿಗೊಳಿಸಿದ ನೋಟೀಸ್ ಪ್ರತಿಯನ್ನು ಈ ವಿಚಾರಣೆ ಮುಂದೆ ತಾನು ಹಾಜರು ಮಾಡಿಲ್ಲ ಎನ್ನುವುದು ನಿಜ. ನಿ.ಡಿ.1 ರಲ್ಲಿ ತಾನು ದಿನಾಂಕ : 25/11/2011 ರಂದು ಅರ್ಜಿದಾರರ ಅರ್ಜಿ ಹಾಗೂ ಗ್ರಾಮಲೆಕ್ಕಾಧಿಕಾರಿಯವರ ಷರಾ ಪ್ರಕಾರ ಮಂಜೂರು ನೀಡಿದೆ ಎಂದು ಬರೆದು, ತನ್ನ ಸಹಿ ಮಾಡಿರುತ್ತೇನೆ. ಸಾಕ್ಷಿಯ ಸಹಿಯನ್ನು ನಿ.ಡಿ.1(ಎ) ಎಂದು ಗುರುತಿಸಲಾಗಿದೆ. ಎಂದು ಸಾಕ್ಷ್ಯ ನುಡಿದಿರುತ್ತಾರೆ.

50. ಮಂಡನಾಧಿಕಾರಿಯವರು ಡಿ.ಡಬ್ಲ್ಯೂ-1 ರವರನ್ನು ವಿಚಾರಣೆಗೊಳಪಡಿಸಿದ ಪಾಟೀ ಸವಾಲಿನಲ್ಲಿ ತಾನು ಯಾವ ಯಾವ ದಾಖಲೆಗಳನ್ನು ಪರಿಶೀಲಿಸಿದೆ ಎಂದು ಬರೆದಿಲ್ಲ

ಎನ್ನುವುದು ನಿಜ. ಮ್ಯುಟೇಷನ್ ಬದಲಾವಣೆಗೆ ಸಂಬಂಧಪಟ್ಟ ದಾಖಲೆಗಳು ಕಚೇರಿಯಲ್ಲಿ ಇರುತ್ತವೆ ಎನ್ನುವುದು ನಿಜ. ನಿ.ಡಿ.2 ರ ಪ್ರಕಾರ ಹಕ್ಕು ಬದಲಾವಣೆಯಾದ 1 ಎಕರೆ ಜಮೀನು ಸಾಯಬಣ್ಣಾ ಮತ್ತು ಅಯ್ಯಪ್ಪರವರಿಗೆ ಸೇರಿದ ಮಾಲೀಕತ್ವದ ಜಮೀನಾಗಿದ್ದು, ಅದರಲ್ಲಿ ರಾಘವೇಂದ್ರ ರವರಿಗೆ ಯಾವುದೇ ಹಕ್ಕು ಇಲ್ಲ ಮತ್ತು ರಾಘವೇಂದ್ರ ರವರು ಸಾಯಬಣ್ಣಾ ಮತ್ತು ಅಯ್ಯಪ್ಪ ರವರ ಸದರಿ ಜಮೀನಿನ ವಹಿವಾಟಿಗೆ ಯಾವುದೇ ತಂಟೆ-ತಕರಾರು ಮಾಡಬಾರದೆಂದು ಸಿವಿಲ್ ನ್ಯಾಯಾಲಯದ ಆದೇಶವಾಗಿದೆ ಎನ್ನುವುದು ನಿಜ. ಎಂದು ಸಾಕ್ಷ್ಯ ನುಡಿದಿರುತ್ತಾರೆ.

51. ಮಂಡನಾಧಿಕಾರಿಯವರು ಡಿ.ಡಬ್ಲ್ಯೂ-1 ರವರನ್ನು ವಿಚಾರಣೆಗೊಳಪಡಿಸಿದ ಪಾಟೀ ಸವಾಲಿನಲ್ಲಿ ತಾನು ಹಾಗೂ ಆ.ಸ.ನೌ-1 ರವರು ಕೂಡಿಕೊಂಡು ದೂರುದಾರರಿಗೆ ಸೇರಿದ 1 ಎಕರೆ ಜಮೀನನ್ನು ಶ್ರೀ. ರಾಘವೇಂದ್ರ ರವರಿಗೆ ಯಾವುದೇ ನೊಂದಾಯಿತ ದಾಖಲೆ ಇಲ್ಲದಿದ್ದರೂ, ಕಾನೂನುಬಾಹಿರವಾಗಿ ರಾಘವೇಂದ್ರ ರವರ ಹೆಸರಿಗೆ ವರ್ಗಾವಣೆ ಮಾಡಿದ್ದೇವೆ ಅಂದರೆ ಸರಿಯಲ್ಲ. ಈ ರೀತಿ ಮಾಡಿ, ತಾನು ತನ್ನ ಕರ್ತವ್ಯದಲ್ಲಿ ಚ್ಯುತಿಯುಂಟು ಮಾಡಿದ್ದೇನೆ ಅಂದರೆ ಸರಿಯಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ.

52. ಪ್ರಕರಣದಲ್ಲಿ ಸಾಕ್ಷಿ-1 ದೂರುದಾರರು ಹಾಜರುಪಡಿಸಿರುವ ನಿಶಾನೆ.ಪಿ-1 ರ ದಾಖಲಾತಿಯು ಲೋಕಾಯುಕ್ತ ಸಂಸ್ಥೆಗೆ ಸಲ್ಲಿಸಿದ ದೂರು ಆಗಿದ್ದು, ನಿಶಾನೆ.ಪಿ-2 ದೂರುದಾರ ಮತ್ತು ಸಾಯಬಣ್ಣಾ ಇವರು ಸೇರಿ ದಿನಾಂಕ : 21/10/1992 ರಂದು ಉಳ್ಳಪ್ಪ ಇವರಿಂದ ಜಮೀನನ್ನು ಖರೀದಿಸಿದ ಖರೀದಿ ಪತ್ರವಾಗಿದ್ದು, ನಿಶಾನೆ.ಪಿ-3 ನಕ್ಷೆಯಾಗಿದ್ದು, ನಿಶಾನೆ.ಪಿ-4 ಮೂಲ ಖಾತೆದಾರ ಉಳ್ಳಪ್ಪ ರವರಿಂದ ಅರ್ಜಿದಾರ ಹಾಗೂ ಸಾಯಬಣ್ಣಾ ರವರ ಹೆಸರಿಗೆ ಖಾತೆ ಬದಲಾವಣೆ ಮಾಡಿದ ಮ್ಯುಟೇಶನ್ ಆಗಿದ್ದು, ನಿಶಾನೆ.ಪಿ-5 ಸರ್ವೆ ಹಿಸ್ಸಾ ಎಕ್ಸ್ಟ್ರಾಕ್ಟ್ ಆಗಿದ್ದು, ನಿಶಾನೆ.ಪಿ-6 ಸಹಾಯಕ ಆಯುಕ್ತರಿಗೆ ಸಲ್ಲಿಸಿದ ಅರ್ಜಿಯ

ಪ್ರತಿಯಾಗಿದ್ದು, ನಿಶಾನೆ.ಪಿ–7 ಸಹಾಯಕ ಆಯುಕ್ತರು ಮಾಡಿದ ಆದೇಶವಾಗಿದ್ದು, ನಿಶಾನೆ.ಪಿ–8 ತಹಶೀಲ್ದಾರ್ ಗುಲ್ಬರ್ಗಾ ಇವರು ಸರ್ವೆ ನಂ.175/2–ಇ ಗೆ ಸಂಬಂಧಪಟ್ಟ ಎಂ.ಆರ್ ನಂ.84/2010–11 ದಿನಾಂಕ : 25/4/2011 ರ ಕಡತದ ಬಗ್ಗೆ ಮಾಹಿತಿ ಹಕ್ಕು ಕಾಯ್ದೆ ಅಡಿ ಸಲ್ಲಿಸಿದ ಅರ್ಜಿಗೆ ಕೊಟ್ಟ ಹಿಂಬರಹವಾಗಿದ್ದು, ನಿಶಾನೆ.ಪಿ–9 ದೂರುದಾರರ ಪ್ರತ್ಯುತ್ತರವಾಗಿರುತ್ತದೆ.

53. ಆ.ಸ.ನೌ– 2 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಹಾಜರುಪಡಿಸಿ ಗುರುತಿಸಲಾದ ನಿಶಾನೆ.ಡಿ–1 ದಾಖಲೆ ಅಂದರೆ ಮ್ಯುಟೇಶನ್ ನಂ.84/2010–11 ದಾಖಲೆಯಾಗಿದ್ದು, ನಿಶಾನೆ.ಡಿ–2 ಗುಲಬರ್ಗಾ ಸಿವಿಲ್ ನ್ಯಾಯಾಲಯವು ಓ.ಎಸ್.ನಂ.199/2014 ರಲ್ಲಿ ಮಾಡಲಾದ ರಾಜೀ ಮೇಲಿನ ಅರ್ಜಿಯ ಆದೇಶವಾಗಿರುತ್ತದೆ. ಸದರಿ ಓ.ಎಸ್. ನಂ. 199/2014 ರ ದಾವೆಯನ್ನು ದೂರುದಾರರು ಹಾಗೂ ಆತನ ಜೊತೆ ಕೂಸನೂರು ಗ್ರಾಮದ ಸರ್ವೆ ನಂ. 175/2 (ಇ) ನ 3 ಎಕರೆ ಜಮೀನಿನ ಜಂಟಿ ಖಾತೆದಾರರಾದ ಸಾಯಬಣ್ಣಾ ಸೇರಿ ರಾಘವೇಂದ್ರ ಎನ್ನುವವರ ಮೇಲೆ ದಾಖಲಿಸಿದ್ದು, ನಂತರ ಉಭಯ ಪಕ್ಷದಾರರು ತಮ್ಮ ತಮ್ಮೊಳಗೆ ರಾಜೀ ಮಾಡಿಕೊಂಡು ರಾಜೀ ಅರ್ಜಿ ಸಲ್ಲಿಸಿದ್ದು, ಮಾನ್ಯ ಸಿವಿಲ್ ನ್ಯಾಯಾಲಯವು ಉಭಯ ಪಕ್ಷಕಾರರು ಮಾಡಿಕೊಂಡ ರಾಜಿಯು ಈ ಕೆಳಕಂಡಂತೆ ಇರುತ್ತದೆ.

> “ ದಾವಾದ ಪ್ರತಿವಾದಿಯಾದ ರಾಘವೇಂದ್ರ ರವರು ಮೇಲೆ ಹೇಳಿದ ಜಮೀನಿಗೆ ದಾವಾದ ವಾದಿಯರಾದ ಸಾಯಬಣ್ಣಾ ಮತ್ತು ಅಯ್ಯಪ್ಪ ರವರು ಮಾಲೀಕರಾಗಿರುತ್ತಾರೆ ಎನ್ನುವುದನ್ನು ಒಪ್ಪಿಕೊಂಡಿರುತ್ತಾರೆ. ದಾವಾ ಸ್ವತ್ತು ಕೂಸನೂರು ಗ್ರಾಮದ ಸರ್ವೆ ನಂ.175/2(ಇ)ದ ಒಂದು ಭಾಗವಾಗಿದೆ ಎನ್ನುವುದನ್ನು ಮತ್ತು ಸದರಿ ಸ್ವತ್ತನ್ನು ವಾದಿಯರು ಮೂಲ ಮಾಲೀಕರಾದ ಉಳ್ಳಪ್ಪ ಹೊನ್ನಳ್ಳಿ ಎನ್ನುವವರಿಂದ ದಿನಾಂಕ:23/10/1992 ರಂದು ನೋಂದಾಯಿತ ದಾಖಲೆ ಮೂಲಕ

ಖರೀದಿಸಿರುತ್ತಾರೆ ಎನ್ನುವುದನ್ನು ಪ್ರತಿವಾದಿಯು ಒಪ್ಪಿಕೊಂಡಿದ್ದು, ಅದರಂತೆ ಸದರಿ ಸ್ವತ್ತಿಗೆ ವಾದಿಯರ ಹೆಸರಿಗೆ ಖಾತೆ ಬದಲಾವಣೆ ಮಾಡಲು ಪ್ರತಿವಾದಿಯು ಒಪ್ಪಿಕೊಂಡಿರುತ್ತಾರೆ ಹಾಗೂ ಇನ್ನು ಮುಂದೆ ಈ ಆಸ್ತಿ ಕುರಿತಂತೆ ಯಾವುದೇ ದಾವೆಗಳನ್ನು ಹೂಡುವುದಿಲ್ಲ ಎಂದು ಪ್ರತಿವಾದಿಯು ಒಪ್ಪಿಕೊಂಡಿರುತ್ತಾರೆ.

ಮೇಲ್ಕಂಡ ರಾಜೀ ಡಿಕ್ರಿಯ ಪ್ರಕಾರವೇ ಫಿರ್ಯಾದುದಾರರಾದ ಶ್ರೀ. ಅಯ್ಯಪ್ಪ ಮತ್ತು ಸಾಯಬಣ್ಣ ರವರು ಕೂಸನೂರು ಗ್ರಾಮದ ಸರ್ವೆ ನಂ.175/2ಇ ಮಾಲೀಕರಾಗಿರುವುದು ಧೃಡಪಡುತ್ತದೆ".

54. ಆ.ಸ.ನೌ-2 ರವರು ಹಾಜರುಪಡಿಸಿರುವ ನಿಶಾನೆ.ಡಿ-1 ದಾಖಲೆಯಲ್ಲಿ ಸಾಯಬಣ್ಣಾ ಮತ್ತು ಅಯ್ಯಪ್ಪ ರವರ ಹೆಸರಿನಲ್ಲಿದ್ದ ಸರ್ವೆ ನಂ.175/2ಇ ಜಮೀನಿನ ಪೈಕಿ 1 ಎಕರೆ ಜಮೀನು ಅಯ್ಯಪ್ಪ ರವರ ಪಾಲಿಗೆ ಬಂದ ಜಮೀನು ರಾಘವೇಂದ್ರ ರವರ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಅರ್ಜಿ ಸಲ್ಲಿಸಿದ್ದರಿಂದ ದಿನಾಂಕ: 19/3/2011 ರಂದು 30 ದಿವಸದ ತಕರಾರು ನೋಟೀಸು ಜಾರಿ ಮಾಡಲಾಯಿತು ಎಂದು ನಮೂದಿಸಿ ಆ.ಸ.ನೌ-1 ರವರು ಸಹಿ ಮಾಡಿದ್ದು, ಕಂಡು ಬರುತ್ತದೆ. ಆದರೆ ನಿಶಾನೆ.ಡಿ-1 ದಾಖಲೆಯಲ್ಲಿ ನೋಟೀಸ್ ಜಾರಿಯಾದ ಬಗ್ಗೆ ಮೂಲ ಖಾತೆದಾರರಾದ ಸಾಯಬಣ್ಣಾ ಮತ್ತು ಅಯ್ಯಪ್ಪರವರ ಸಹಿಗಳು ಕಂಡುಬರುವುದಿಲ್ಲ ಹಾಗೂ ಆ ಬಗ್ಗೆ ಯಾವುದೇ ದಾಖಲೆಯೂ ಸಹ ಇರುವುದಿಲ್ಲ. ಅದೂ ಅಲ್ಲದೆ ಅರ್ಜಿದಾರ ರಾಘವೇಂದ್ರ ರವರ ಅರ್ಜಿಯು ಸಹ ಲಭ್ಯವಿರುವುದಿಲ್ಲ. ನಿಶಾನೆ.ಡಿ-1 ದಾಖಲೆಯಲ್ಲಿ ಮೇಲೆ ಹೇಳಿದಂತೆ ಆ.ಸ.ನೌ-1 ರವರು ಹೇಳಿ ಸಹಿ ಮಾಡಿದ ನಂತರ ಆ.ಸ.ನೌ-1 ರವರು ಪುನ: ಮೇಲಿನ ನೋಟೀಸಿನ ಅವಧಿಯಲ್ಲಿ ಯಾವುದೇ ತಕರಾರು ಬಂದಿರುವುದಿಲ್ಲ ಆದರೆ ಸಾಯಬಣ್ಣಾ ಮತ್ತು ಅಯ್ಯಪ್ಪ ರವರುಗಳ ಹೆಸರಿನಲ್ಲಿ ಜಂಟಿಯಾಗಿ 2-37 ಗುಂಟೆ ಜಮೀನು ಇರುತ್ತದೆ ಇದರಲ್ಲಿ ಅಯ್ಯಪ್ಪ ರವರು ತನ್ನ ಪಾಲಿಗೆ 1 ಎಕರೆ ಜಮೀನು ಇದ್ದು, ರಾಘವೇಂದ್ರ ರವರ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಅರ್ಜಿ

ಸಲ್ಲಿಸಿರುತ್ತಾರೆ. ಆದರೆ ಅಯ್ಯಪ್ಪ ಇವರ 1 ಎಕರೆ ಜಮೀನು ಹೋದ ಮೇಲೆ ಇನ್ನು ಉಳಿದ ಜಮೀನಿನಲ್ಲಿ ಸಾಯಬಣ್ಣಾ ಉಳಿಯುತ್ತಾರೆ. ಆದ್ದರಿಂದ ಕಡತವನ್ನು ಪರಿಶೀಲಿಸಿ ಮಂಜೂರಿ ಮಾಡಬಹುದಾಗಿದೆ ಎಂದು ನಮೂದಿಸಿದ್ದು ಅಲ್ಲದೆ ಮೇಲಿನ ಹಕ್ಕು ಬದಲಾವಣೆಗೆ ಇಬ್ಬರೂ ಖಾತೆದಾರರು ಒಪ್ಪಿಗೆ ನೀಡಿರುತ್ತಾರೆ, ಮಂಜೂರಿ ನೀಡಬಹುದು ಎಂದು ನಮೂದಿಸಿ ಆ.ಸ.ನೌ–1 ರವರು ಸಹಿ ಮಾಡಿರುತ್ತಾರೆ. ಇದಾದ ನಂತರ ನಿಶಾನೆ.ಡಿ–1 ರಲ್ಲಿ ಅರ್ಜಿದಾರರ ಅರ್ಜಿ ಹಾಗೂ ಗ್ರಾಮಲೆಕ್ಕಾಧಿಕಾರಿ ಷರಾ ಪ್ರಕಾರ ಮಂಜೂರಿ ನೀಡಿದೆ ಎಂದು ನಮೂದಿಸಿ ಆ.ಸ.ನೌ–2 ರವರು ಸಹಿ ಮಾಡಿರುತ್ತಾರೆ. ಆ.ಸ.ನೌ–1 ರವರು ನಿಶಾನೆ.ಡಿ–1 ರಲ್ಲಿ ನಮೂದಿಸಿರುವಂತೆ ಮೂಲ ಖಾತೆದಾರರಾದ ಸಾಯಬಣ್ಣಾ ಮತ್ತು ಅಯ್ಯಪ್ಪ ರವರು ಖಾತೆ ಬದಲಾವಣೆಗೆ ಒಪ್ಪಿಗೆ ಸೂಚಿಸಿರುವ ಬಗ್ಗೆ ಯಾವುದೇ ದಾಖಲೆಯು ಇರುವುದಿಲ್ಲ. ಆ.ಸ.ನೌ–2 ರವರು ತಮ್ಮ ಪಾಟೀ ಸವಾಲಿನಲ್ಲಿ ದಿನಾಂಕ : 25/4/2011 ರಂದು 1 ಎಕರೆ ಜಮೀನನ್ನು ರಾಘವೇಂದ್ರ ಎನ್ನುವವರ ಹೆಸರಿಗೆ ಹಕ್ಕು ಬದಲಾವಣೆ ಮಂಜೂರಾತಿ ತಾವೇ ಮಾಡಿರುವುದಾಗಿ ಮತ್ತು ಮ್ಯುಟೇಶನ್ ಮಂಜೂರಾತಿ ಮಾಡುವ ಕಾಲಕ್ಕೆ ಹಕ್ಕು ಬದಲಾವಣೆ ಮಾಡಿಸಿಕೊಳ್ಳುವವರ ಅರ್ಜಿ ಹಾಗೂ ಮೂಲ ಮಾಲೀಕರ ಒಪ್ಪಿಗೆ ಪತ್ರ ಸ್ಟ್ಯಾಂಪ್ ಮೇಲೆ ಬರೆದುಕೊಟ್ಟಿದ್ದನ್ನು ನೋಡಿ ಮ್ಯುಟೇಶನ್ ಮಂಜೂರಾತಿ ಮಾಡಿರುತ್ತೇನೆ ಹಾಗೂ ಸಂಬಂಧಪಟ್ಟ ಗ್ರಾಮಲೆಕ್ಕಾಧಿಕಾರಿ ಖಾತೆ ಬದಲಾವಣೆಗೆ ಶಿಫಾರಸ್ಸು ಮಾಡಿರುವುದನ್ನು ನೋಡಿ ಹಾಗೂ ಅದಕ್ಕೆ ಇರುವ ಪೂರಕ ದಾಖಲೆಗಳನ್ನು ಪರಿಶೀಲಿಸಿ ಹಕ್ಕು ಬದಲಾವಣೆ ಮಂಜೂರಾತಿ ಮಾಡಿರುತ್ತೇನೆ ಎಂದು ಹೇಳಿಕೆ ಕೊಟ್ಟಿರುತ್ತಾರೆ. ಆದರೆ ಒಪ್ಪಿಗೆ ಪತ್ರ ಮೂಲ ಮಾಲೀಕರಿಂದ ಬರೆದು ಕೊಟ್ಟಂತಹ ನೋಂದಾಯಿತ ಖರೀದಿ ಪತ್ರ ಅಲ್ಲ ಅನ್ನುವುದು ನಿಜ ಅಂತ ಒಪ್ಪಿಕೊಂಡಿರುತ್ತಾರೆ. ಸದರಿ ಆ.ಸ.ನೌ ರವರು ಮೂಲ ಮಾಲೀಕರು ಬರೆದುಕೊಟ್ಟಿದ್ದಾರೆ ಎನ್ನುವ ಒಪ್ಪಿಗೆ ಪತ್ರವನ್ನು ತಾನು ಹಾಜರುಪಡಿಸಿಲ್ಲ. ಅದು ತಮ್ಮ ಕಚೇರಿಯ ದಾಖಲೆಗಳಲ್ಲಿ ಲಭ್ಯವಿರುತ್ತದೆ ಎನ್ನುವುದು ನಿಜ ಅಂತ ಸಹ ಒಪ್ಪಿಕೊಂಡಿರುತ್ತಾರೆ. ಆದಾಗ್ಯೂ ಸಹ ಆ.ಸ.ನೌ–2 ರವರು ಖಾತೆ ಬದಲಾವಣೆಗೆ ಮೂಲ ಮಾಲೀಕರು ಬರೆದು ಕೊಟ್ಟಂತಹ ಒಪ್ಪಿಗೆ

ಪತ್ರವನ್ನು ಹಾಜರುಪಡಿಸಿರುವುದಿಲ್ಲ. ಅದೂ ಅಲ್ಲದೆ ಆ.ಸ.ನೌ-2 ರವರು ತನ್ನ ಮುಂದುವರೆದ ಪಾಟೀ ಸವಾಲಿನಲ್ಲಿ ಒಂದು ಸ್ಥಿರ ಆಸ್ತಿ ಮೂಲ ಮಾಲೀಕರಿಂದ ಬೇರೆಯವರಿಗೆ ಮಾಲೀಕತ್ವ ಬದಲಾವಣೆಯಾಗಬೇಕಾದರೆ ಸದರಿ ದಾಖಲಾತಿ ಸಬ್ ರಿಜಿಸ್ಟ್ರಾರ್ ರವರ ಕಚೇರಿಯಲ್ಲಿ ನೊಂದಾವಣೆ ಆಗಿದ್ದಲ್ಲಿ ಮಾತ್ರ ಸದರಿ ನೋಂದಾಯಿತ ದಾಖಲೆಯ ಆಧಾರದ ಮೇಲಿಂದ ಹಕ್ಕು ಬದಲಾವಣೆ ಮಾಡಲು ಅವಕಾಶ ಇರುತ್ತದೆ ಎನ್ನುವುದು ನಿಜ ಅಂತ ಒಪ್ಪಿಕೊಂಡಿರುತ್ತಾರೆ ಹಾಗೂ ರಾಘವೇಂದ್ರ ರವರ ಹೆಸರಿಗೆ ಮೇಲೆ ಹೇಳಿದ ಜಮೀನಿನಲ್ಲಿ 1 ಎಕರೆ ಕ್ಷೇತ್ರವನ್ನು ಹಕ್ಕು ಬದಲಾವಣೆ ಮಾಡಿದ ಬಗ್ಗೆ ಯಾವುದೇ ನೋಂದಾಯಿತ ದಾಖಲೆ ಇರುವುದಿಲ್ಲ ಎನ್ನುವುದನ್ನು ಸಹ ಒಪ್ಪಿಕೊಂಡಿರುತ್ತಾರೆ. ಆ.ಸ.ನೌ-2 ರವರು ಮುಂದುವರೆದ ಪಾಟೀ ಸವಾಲಿನಲ್ಲಿ ಮೂಲ ಮಾಲೀಕರಿಗೆ ಗ್ರಾಮಲೆಕ್ಕಾಧಿಕಾರಿ ಜಾರಿಗೊಳಿಸಿದ ನೋಟೀಸ್ ಪ್ರತಿಯನ್ನು ಈ ವಿಚಾರಣೆ ಮುಂದೆ ತಾನು ಹಾಜರು ಮಾಡಿಲ್ಲ ಎನ್ನುವುದು ಸಹ ನಿಜ ಅಂತ ಒಪ್ಪಿಕೊಂಡಿರುತ್ತಾರೆ. ಆ.ಸ.ನೌ-2 ರವರ ಪಾಟೀ ಸವಾಲಿನಲ್ಲಿಯ ಅಂಶಗಳ ಮೇರೆಗೆ ಆ.ಸ.ನೌ-1 ರವರು ಖಾತೆ ಬದಲಾವಣೆ ಬಗ್ಗೆ ಜಮೀನಿನ ಮೂಲ ಮಾಲೀಕರಿಗೆ ಖುದ್ದಾಗಿ ನೋಟೀಸ್ ಜಾರಿಗೊಳಿಸದೆ ನಿಶಾನೆ.ಡಿ-1 ದಾಖಲೆಯಲ್ಲಿ ದಿನಾಂಕ: 19/3/2011 ರಂದು 30 ದಿವಸದ ತಕರಾರು ನೋಟೀಸು ಜಾರಿ ಮಾಡಲಾಯಿತು ಎಂದು ನಮೂದಿಸಿ ನಂತರ ಹಕ್ಕು ಬದಲಾವಣೆಗೆ ಇಬ್ಬರೂ ಖಾತೆದಾರರು ಒಪ್ಪಿಗೆ ನೀಡಿರುತ್ತಾರೆ, ಮಂಜೂರಾತಿ ನೀಡಬಹುದು ಎಂದು ಸುಳ್ಳು ಷರಾ ಬರೆದಿದ್ದರ ಮೇರೆಗೆ ಆ.ಸ.ನೌ-2 ರವರು ಖಾತೆ ಬದಲಾವಣೆಗೆ ಮೂಲ ಮಾಲೀಕರಿಂದ ನೋಂದಾಯಿತ ಖರೀದಿ ಪತ್ರವಾಗಲೀ ಅಥವಾ ಮತ್ತ್ಯಾವದೇ ನೋಂದಾಯಿತ ಪತ್ರವಾಗಲೀ ಇರದೇ ಇದ್ದರೂ ಸಹ ಸ್ಥಿರ ಆಸ್ತಿಯನ್ನು ಖಾತೆ ಬದಲಾವಣೆಗೆ ಮಂಜೂರಾತಿ ನೀಡಿರುವುದು ಸ್ಪಷ್ಟವಾಗುತ್ತದೆ. ಆ.ಸ.ನೌ-1 ಮತ್ತು 2 ರವರು ಈ ವಿಚಾರಣೆ ನ್ಯಾಯಾಲಯದ ಮುಂದೆ ಮೂಲ ಮಾಲೀಕರಿಂದ ರಾಘವೇಂದ್ರ ರವರ ಹೆಸರಿಗೆ ಖಾತೆ ಬದಲಾವಣೆ ಮಾಡುವ ಕುರಿತಂತೆ ಇರುವ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಈ ಬಗ್ಗೆ ಶಿಸ್ತು ಪ್ರಾಧಿಕಾರದ ಪರವಾಗಿ ವಿಚಾರಣೆ ಮಾಡಲಾದ

ದೂರುದಾರ ಸಾಕ್ಷಿ–1 ರವರು ತಮ್ಮ ಹೇಳಿಕೆಯಲ್ಲಿ ಮಾಹಿತಿ ಹಕ್ಕು ಕಾಯಿದೆಯಲ್ಲಿ ಸಂಬಂಧಪಟ್ಟ ಕಡತವನ್ನು ಕೋರಲಾಗಿ ಕೋರಿದ ಕಡತ ಸಿಗುತ್ತಿಲ್ಲ ಎಂದು ಹಿಂಬರಹ ನೀಡಿರುತ್ತಾರೆ ಎಂದು ಸದರಿ ಹಿಂಬರಹವನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ–8 ಎಂದು ಗುರುತಿಸಲಾಗಿದೆ. ಆ.ಸ.ನೌ–1 ಮತ್ತು 2 ರವರು ಖಾತೆ ಬದಲಾವಣೆಗೆ ಸಲ್ಲಿಸಿದ ಅರ್ಜಿ, ಒಪ್ಪಿಗೆ ಪತ್ರ, ನೋಟೀಸ್ ಜಾರಿಯಾದ ಬಗ್ಗೆ ದಾಖಲೆ ಇವುಗಳನ್ನು ಉದ್ದೇಶ ಪೂರಕವಾಗಿ ಹಾಜರುಪಡಿಸಿರುವುದಿಲ್ಲ. ಆ.ಸ.ನೌ–1 ಮತ್ತು 2 ರವರ ಪರ ವಕೀಲರು ಸಾಕ್ಷಿ–1 ದೂರುದಾರರ ಪಾಟೀ ಸವಾಲಿನಲ್ಲಿ ನಿಶಾನೆ.ಪಿ–4 ರಂತೆ ದೂರುದಾರರಿಗೆ ಗ್ರಾಮಲೆಕ್ಕಾಧಿಕಾರಿಗಳಿಂದ ನೋಟೀಸ್ ಜಾರಿಯಾಗಿತ್ತು ಎಂದು ಸೂಚಿಸಿದ್ದು, ಆದರೆ ನಿಶಾನೆ.ಪಿ–4 ದಾಖಲೆಯು ರಾಘವೇಂದ್ರ ರವರ ಹೆಸರಿಗೆ ಖಾತೆ ಬದಲಾವಣೆಯಾದ ಬಗ್ಗೆ ಇರುವ ದಾಖಲೆಯೇ ಆಗಿರುವುದಿಲ್ಲ, ಆದಾಗ್ಯೂ ಆ.ಸ.ನೌ–1 ಮತ್ತು 2 ರವರ ಪರ ವಕೀಲರು ತಪ್ಪು ಕಲ್ಪನೆಯಿಂದ ಆ ರೀತಿ ಸೂಚಿಸಿರುತ್ತಾರೆ ಎನ್ನುವುದು ಸ್ಪಷ್ಟವಾಗುತ್ತದೆ. ನಿಶಾನೆ.ಪಿ–4 ದಾಖಲೆಯು ಜಮೀನಿನ ಮೂಲ ಮಾಲೀಕರಾದ ಉಳ್ಳಪ್ಪ ರವರಿಂದ ದೂರುದಾರ ಅಯ್ಯಪ್ಪ ಮತ್ತು ಸಾಯಬಣ್ಣಾ ಇವರ ಹೆಸರಿಗೆ ಖಾತೆ ಬದಲಾವಣೆಯಾದ ಬಗ್ಗೆ ಇರುವ ದಿನಾಂಕ : 17/12/1992 ರಲ್ಲಿ ಮ್ಯುಟೇಶನ್ ಮಂಜೂರಾತಿಯಾದ ಬಗ್ಗೆ ಇರುವ ದಾಖಲೆಯಾಗಿರುತ್ತದೆ.

55. ಪ್ರಕರಣದಲ್ಲಿ ವಿಚಾರಣೆ ಮಾಡಲಾದ ಸಾಕ್ಷಿ–1 ದೂರುದಾರರ ಹೇಳಿಕೆ ಮೇಲಿಂದ, ಆ.ಸ.ನೌ–2 ರವರ ಪಾಟೀ ಸವಾಲಿನಲ್ಲಿಯ ಅಂಶಗಳ ಮೇಲಿಂದ ಹಾಗೂ ಪ್ರಕರಣದಲ್ಲಿ ಹಾಜರುಪಡಿಸಲಾದ ದಾಖಲಾತಿಗಳ ಮೇಲಿಂದ ಆ.ಸ.ನೌ–1 ರವರು ಕೂಸನೂರು ಗ್ರಾಮದ ಗ್ರಾಮಲೆಕ್ಕಾಧಿಕಾರಿಯಾಗಿ 2010–11 ರಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಕೂಸನೂರು ಗ್ರಾಮದ ಸರ್ವೆ ನಂ.175/2ಇ ಜಮೀನಿನಲ್ಲಿಯ 1 ಎಕರೆ ಕ್ಷೇತ್ರವನ್ನು ಮೂಲ ಖಾತೆದಾರರ ದೂರುದಾರ ಶ್ರೀ. ಅಯ್ಯಪ್ಪ ಬಿನ್ ನಿಂಗಪ್ಪ ರವರ ಹೆಸರಿನಿಂದ ಶ್ರೀ. ರಾಘವೇಂದ್ರ ಗುಂಡಪ್ಪ ಟೊಣ್ಣೆ ಇವರ ಹೆಸರಿಗೆ ಖಾತೆ ಬದಲಾವಣೆ ಮಾಡಲು ಮೂಲ ಖಾತೆದಾರರಾದ ದೂರುದಾರ

ಅಯ್ಯಪ್ಪರವರಿಗೆ ನೋಟೀಸ್ ಜಾರಿಗೊಳಿಸದೆ ಮತ್ತು ಖಾತೆ ಬದಲಾವಣೆಗೆ ಇರಬೇಕಾಗಿದ್ದ ನೋಂದಾಯಿತ ದಾಖಲೆಗಳು ಇರದೇ ಇದ್ದರೂ ಖಾತೆ ಬದಲಾವಣೆಗೆ ಶಿಫಾರಸ್ಸು ಮಾಡಿರುವುದು ಹಾಗೂ ಸದರಿ ಕೂಸನೂರು ಗ್ರಾಮದ ಕಂದಾಯ ನಿರೀಕ್ಷಕರಾದ ಆ.ಸ.ನೌ – 2 ರವರು ಆ.ಸ.ನೌ–1 ರವರ ಶಿಫಾರಸ್ಸಿನ ಮೇಲೆ ಯಾವುದೇ ದಾಖಲೆಗಳನ್ನು ಪರಿಶೀಲಿಸದೆ ಮತ್ತು ಆ.ಸ.ನೌ–1 ರವರ ವರದಿಯ ಸತ್ಯಾ ಸತ್ಯತೆಯನ್ನು ಪರಿಶೀಲಿಸದೆ ಖಾತೆ ಬದಲಾವಣೆಗೆ ಮಂಜೂರಾತಿ ಆದೇಶ ಮಾಡಿ ಆ.ಸ.ನೌ–1 ಮತ್ತು 2 ರವರು ತಮ್ಮ ಕರ್ತವ್ಯದಲ್ಲಿ ಕರ್ತವ್ಯ ಲೋಪ ಎಸಗಿ ದುರ್ನಡತೆ ತೋರಿರುವುದು ಕಂಡು ಬಂದಿದ್ದು, ಆ.ಸ.ನೌ–1 ಮತ್ತು 2 ರವರು ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ನಾಟಕ ನಾಗರಿಕ ಸೇವಾ ನಿಯಮಗಳು (ನಡತೆ) 1966 ರ ನಿಯಮ 3(1)(i) ರಿಂದ (iii) ರಡಿಯಲ್ಲಿ, ಕರ್ತವ್ಯ ಲೋಪ ಮತ್ತು ದುರ್ನಡತೆ ಎಸಗಿರುವುದು ರುಜುವಾತಾಗಿರುತ್ತದೆ. ಈ ಎಲ್ಲಾ ಕಾರಣಗಳಿಂದ **ಅಂಶ–1 ಕ್ಕೆ ಆ.ಸ.ನೌ–1 ಮತ್ತು 2 ರವರ ಮೇಲೆ ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.**

**ಅಂಶ–2: ಈ ಮೇಲ್ಕಂಡ ಕಾರಣಗಳಿಗಾಗಿ ಈ ಕೆಳಕಂಡಂತೆ ಆದೇಶಿಸಲಾಗಿದೆ.**

## ಆದೇಶ

ಶಿಸ್ತು ಪ್ರಾಧಿಕಾರದವರು ಆ.ಸ.ನೌ–1) ಶ್ರೀ. ರಾಜಾ ಅಹ್ಮದ, ಹಿಂದಿನ ಗ್ರಾಮ ಲೆಕ್ಕಾಧಿಕಾರಿ, ಕೂಸನೂರು ಗ್ರಾಮ, ನಿಂಬರ್ಗ ಹೋಬಳಿ, ಆಳಂದ ತಾಲ್ಲೂಕು, ಕಲಬುರ್ಗಿ ಜಿಲ್ಲೆ ಮತ್ತು 2) ಶ್ರೀ. ಶಾಂತಕುಮಾರ್ ವಾಡಿ, ಹಿಂದಿನ ರಾಜಸ್ವ ನಿರೀಕ್ಷಕರು, ಪ್ರಸ್ತುತ ಉಪ ತಹಶೀಲ್ದಾರ್, ಕೂಸನೂರು ಗ್ರಾಮ, ನಿಂಬರ್ಗ ಹೋಬಳಿ, ಆಳಂದ ತಾಲ್ಲೂಕು, ಕಲಬುರ್ಗಿ ಜಿಲ್ಲೆ ರವರುಗಳ ವಿರುದ್ಧ

ಹೊರಿಸಲಾದ ಆರೋಪವನ್ನು ರುಜುವಾತುಪಡಿಸಲಾಗಿದೆ ಎಂದು ನಿರ್ಣಯಿಸಲಾಗಿದೆ.

ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ-1 ರವರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಕಛೇರಿಗೆ ಆದೇಶಿಸಲಾಗಿದೆ.

30/4

**(ಶೋಭಾ ಎಸ್)**
ಅಪರ ನಿಬಂಧಕರು (ವಿಚಾರಣೆಗಳು-13),
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

# ANNEXURES

| File 3 | **Witness examined on behalf of the Disciplinary Authority** |
|---|---|
| | **PW-1**: Sri. Ayyappa (Original) |
| | **Witness examined on behalf of the Defence** |
| | **DW-1:** Sri. Shankumar (Original) |
| File 4 | **Documents marked on behalf of the Disciplinary Authority** |
| | **Ex. P-1**: Complaint (Original) |
| | **Ex.P-1(a)**: Form No.I (Original) |
| | **Ex. P-1(b)** : Form No-II (Original) |
| | **Ex.P-2**: Sale Deed copy (Xerox copies) |
| | **Ex.P-3:** Podi copy (Xerox) |
| | **Ex.P-4:** Copy of Mutation Register (Form -12) |
| | **Ex.P-5:** Extract of Survey (Xerox copy) |
| | **Ex.P-6:** Letter from Saibanna dated :02/06/2011 to Assistant Commissioner, Gulbarga ( Xerox ) |
| | **Ex.P-7:** Proceedings of Assistant Commissioner, Gulbarga dated: 22/12/2012 (Xerox ) |
| | **Ex.P-8:** The letter of Tahasildar, Gulbarga dated:05/12/2011 addressed to Sri. Thippanna, Jevargi Taluk, Gulbarga District (Xerox) |
| | **Ex.P-9:** The letter dated: 24/12/2014 given by complainant to Deputy Registrar Enquiry-3, Karnataka Lokayukta, Bengaluru (Xerox) |

| | Documents marked on behalf of the DGO |
|---|---|
| | **Ex.D-1:** Note of regarding the khatha transfer of Kusanur Village Sy. No.175/2E (Xerox)<br>**Ex.D-1(a):** Signature of the DGO. |
| | **Ex.D-2:** Compromise decree in O.S. No.199/2014 of the court of Additional Senior Civil Judge, Kalaburgi (certified copy) |

**Dated this the 30th day of April 2022**

30/4

**( Shobha. S)**
Additional Registrar Enquiries-13
Karnataka Lokayukta
Bangalore